ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 260 RNI Number : KNKAN/25/A2770 03-10-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:260 ರಾಯಚೂರು 03-10-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ರಾಜ್ಯದ ಮೊದಲ 'ಗಾಂಧಿ ಸ್ಮಾರಕ ಸ್ತಂಭ' ಅನಾವರಣ

ಬೆಂಗಳೂರು,ಅ.02– ಮಹಾತ್ಮ ಗಾಂಧೀಜಿಯವರು ಕರ್ನಾಟಕದಲ್ಲಿ ಭೇಟಿ ನೀಡಿದ್ದ ವಿವಿಧ 87 ಐತಿಹಾಸಿಕ ಸ್ಥಳಗಳಲ್ಲಿ 'ಗಾಂಧಿ ಸ್ಮಾರಕ ಸ್ತಂಭ' ಸ್ಥಾಪಿಸುವ ಕರ್ನಾಟಕ ಸರ್ಕಾರದ ಆಯವ್ಯಯ ಘೋಷಣೆಯ ಭಾಗವಾಗಿ, ರಾಜ್ಯದ ಮೊದಲ ಗಾಂಧಿ ಸ್ಮಾರಕ ಸ್ತಂಭವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ಬೆಂಗಳೂರಿನ ಇಂದಿನ ಸರ್ಕಾರಿ ಕಲಾ ಕಾಲೇಜು (GAS ಕಾಲೇಜು) ಆವರಣದಲ್ಲಿ ಅನಾವರಣಗೊಳಿಸಿದರು.

ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷಗಳು ಪೂರೈಸಿದ ನೆನಪಿಗಾಗಿ "ಗಾಂಧಿ ಭಾರತ" ಅಭಿಯಾನದಡಿಯಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಈ ಸ್ಮಾರಕ ಸ್ತಂಭಗಳನ್ನು ನಿರ್ಮಿಸಲಾಗುತ್ತಿದೆ.

ಶಾಸಕರು ಹಾಗೂ ಗಾಂಧಿ ಭಾರತ ಶತಮಾನೋತ್ಸವ ಸಮಿತಿ ಅಧ್ಯಕ್ಷರಾದ ಎಚ್. ಕೆ.ಪಾಟೀಲ, ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾದ ಬಿ.ಎಲ್.ಶಂಕರ್,

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಜೆ. ಮಂಜುನಾಥ್ ಐ.ಎ.ಎಸ್. ಸೇರಿದಂತೆ



ಗಾಂಧಿ ಭಾರತ ಸಮಿತಿಯ ಪದಾಧಿಕಾರಿಗಳು, ಸರ್ಕಾರಿ ಕಲಾ ಕಾಲೇಜಿನ ಪ್ರಾಧ್ಯಾಪಕರು, ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಗಾಂಧಿ ಸ್ಮಾರಕ ಸ್ತಂಭ ಸಿದ್ದಡಿಸಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ನಾಗೇಂದ್ರ ಕುಮಾರ್ ಜಿ.ಸಿ. ನಿರ್ಮಿತಿ ಕೇಂದ್ರದ ಅಭಿಯಂತರರಾದ ರಾಜೀವ್ ಅವರನ್ನು ಸನ್ಮಾನಿಸಿದರು.

3ನೇ ಪುಟಕ್ಕೆ

ಕೈಬಿಟ್ಟ ಮತದಾರರ ಸೇರ್ಪಡೆ ಅಭಿಯಾನ : ಆಯೋಗ ಸೂಚನೆ

ನವದೆಹಲಿ, ಅ. 2– ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿಚಾರವಾಗಿ ಚರ್ಚೆ ಹಾಗೂ ಟೀಕೆಗಳು ಮುಂದುವರಿದಿರುವ ಬೆನ್ನಲ್ಲೇ, ಚುನಾವಣಾ ಆಯೋಗವು ಮಹತ್ವದ ಕ್ರಮ ಕೈಗೊಂಡಿದೆ. ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿರುವ 20 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯಿಂದ ಹೊರಗುಳಿದ ಅರ್ಹ ಮತದಾರರು ಹಾಗೂ ಹೊಸದಾಗಿ ಮತದಾನಕ್ಕೆ ಅರ್ಹರಾದವರನ್ನು ಸೇರ್ಪಡೆ



ಗೊಳಿಸಲು ವಿಶೇಷ ಅಭಿಯಾನ ನಡೆಸುವಂತೆ ಆಯೋಗ ಸೂಚಿಸಿದೆ.

ಸೆಪ್ಟೆಂಬರ್ 29ರಂದು ಹೊರಡಿಸಲಾದ ನಿರ್ದೇಶನದ ಬಳಿಕ ನಡೆದ ಎಲ್ಲ ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳ (ಸಿಇಒ) ವಿಡಿಯೋ ಸಭೆಯಲ್ಲೂ ಪುನರುಚ್ಚರಿಸಲಾಗಿದೆ. ಎಸ್‌ಐಆರ್ ವೇಳೆ ಅಥವಾ ಅದರ ಬಳಿಕ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದೆ ಉಳಿದಿರುವ ಅರ್ಹರು ಹಾಗೂ ಮೊದಲ ಬಾರಿಗೆ ಮತದಾನಕ್ಕೆ

ಅರ್ಹರಾದ ಯುವಜನರಿಗೆ ನಿರಂತರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯುಡಿ ಹೆಸರು ನೋಂದಾಯಿಸಲು ಅವಕಾಶ ಕಲ್ಪಿಸುವಂತೆ ಸಿಇಒ, ಜಿಲ್ಲಾ ಚುನಾವಣಾಧಿಕಾರಿ ಹಾಗೂ ಮತದಾರರ ನೋಂದಣಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.

3ನೇ ಪುಟಕ್ಕೆ

ರಾಯಚೂರಿನಲ್ಲಿ ಮಹಾತ್ಮ ಗಾಂಧೀಜಿ ಅವರ 157ನೇ ಜಯಂತಿ ಆಚರಣೆ

ಗಾಂಧೀಜಿಯವರ ಸತ್ಯಾಗ್ರಹ, ಅಹಿಂಸಾ ಮಾರ್ಗ ಇಂದಿಗೂ ಪ್ರಸ್ತುತ: ಜಿಲ್ಲಾಧಿಕಾರಿ ಪೂವಿತಾ

ರಾಯಚೂರು ಅಕ್ಟೋಬರ್ 02

ನಗರದ ಜಿಲ್ಲಾ ಕ್ರೀಡಾಂಗಣದ ಹತ್ತಿರದಲ್ಲಿರುವ ಮಹಾತ್ಮಗಾಂಧಿ ಪುತ್ಥಳಿ ಬಳಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮ ಗಾಂಧೀಜಿ ಅವರ 157ನೇ ಜಯಂತಿ ಆಚರಿಸಲಾಯಿತು.

ಈ ವೇಳೆ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಮಹಾತ್ಮ ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಮಾತನಾಡಿ, ಜೀವನದುದ್ದಕ್ಕೂ ಸತ್ಯಾಗ್ರಹ ಮತ್ತು ಅಹಿಂಸೆಯ ಮಾರ್ಗವನ್ನೇ ತಮ್ಮ ಬದುಕಿನ ಉದಾಹರಣೆಯಾಗಿ ತೋರಿಸಿಕೊಟ್ಟ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ತತ್ವಗಳು ಇಂದಿನ ಆಧುನಿಕ ಕಾಲದಲ್ಲೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಹಲವಾರು ಕಠಿಣ ಹಾಗೂ ಹಿಂಸಾತ್ಮಕ ದಾರಿಗಳನ್ನು ಬಿಟ್ಟು, ಕೇವಲ ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ನಡೆದರೆ ಮಾತ್ರ ನಮಗೆ ನಿಜವಾದ ಸ್ವಾತಂತ್ರ್ಯ ಹಾಗೂ ಶಾಂತಿ ಸಿಗಲು ಸಾಧ್ಯ ಎಂಬುದನ್ನು ಗಾಂಧೀಜಿಯವರು ತಮ್ಮ ಸ್ವಂತ ಬದುಕಿನ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಅವರು ಬೋಧಿಸಿದ ಮಾರ್ಗದಲ್ಲೇ ನಡೆದು, ಇಡೀ ದೇಶದ ಜನರನ್ನು ಮುನ್ನಡೆಸಿ ನಮಗೆ ಸ್ವಾತಂತ್ರ್ಯ ತಂದುಕೊಟ್ಟ ಮಹಾನ್ ಚೇತನ ಮಹಾತ್ಮ ಗಾಂಧಿ ಅವರು ಆಗಿದ್ದಾರೆ ಎಂದರು.



ಇದಿನ ದಿನಗಳಲ್ಲೂ ಅವರ ಬದುಕು ಮತ್ತು ಬೋಧನೆಗಳು ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಗೂ ಉತ್ತಮ ದಾರಿಯನ್ನು ತೋರಿಸುವ ದೊಡ್ಡ ಉದಾಹರಣೆಯಾಗಿವೆ. ಗಾಂಧೀಜಿಯವರು ತೋರಿಸಿದ ಸತ್ಯ ಹಾಗೂ ಅಹಿಂಸೆಯ ಮಾರ್ಗದಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದರು.

ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಮಾತನಾಡಿ, ಇಡೀ ಜಗತ್ತಿನಲ್ಲಿ ಯಾವುದೇ ಆಯುಧ, ಬಂದೂಕು ಅಥವಾ ಕತ್ತಿ ಇಲ್ಲದೆ ಬ್ರಿಟಿಷರ ದೊಡ್ಡ ಸಾಮ್ರಾಜ್ಯವನ್ನು ಅಹಿಂಸೆ ಮೂಲಕ ಎದುರಿಸಿ, ಓಡಿಸಿದ ಕೀರ್ತಿ ನಮ್ಮ ಮಹಾತ್ಮ ಗಾಂಧೀಜಿಯವರಿಗೆ ಸಲ್ಲುತ್ತದೆ. ವಿಶ್ವದ 150ಕ್ಕಿಂತ ಹೆಚ್ಚು ದೇಶಗಳಲ್ಲಿ ರಾಷ್ಟ್ರಪಿತ ಗಾಂಧೀಜಿಯವರ ಪ್ರತಿಮೆಗಳನ್ನು ಸ್ಥಾಪಿಸಿ, ಪೂಜಿಸಲಾಗುತ್ತದೆ. ನೆಲ್ಸನ್ ಮಂಡೇಲಾ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರಂತಹ ಮಹಾನ್ ನಾಯಕರಿಗೂ ಗಾಂಧೀಜಿಯೇ ಆದರ್ಶರಾಗಿದ್ದರು ಎಂದರು.

ಗಾಂಧೀಜಿ ಪ್ರಕಾರ ಅಹಿಂಸೆ ಎಂದರೆ ಕೇವಲ ಮುಟ್ಟದಿರುವುದಲ್ಲ, ಬದಲಾಗಿ ನ್ಯಾಯ ಒಬ್ಬ ಅಧಿಕಾರಿಯಾಗಿ ತಡವಾಗಿ ಫೈಲ್ ವಿಲೇವಾರಿ ಮಾಡುವುದು ಕೂಡ ಹಿಂಸೆಯೇ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಪ್ಲಾಸ್ಟಿಕ್ ಪ್ಯಾಕೆಟ್ ತಿಂದು ಚರಂಡಿಗೆ ಹಾಕಿ, ಅದನ್ನು ಪಾಲಿಕೆ ಅಥವಾ ಪೌರಕಾರ್ಮಿಕರು ಬಂದು ಸ್ವಚ್ಛಗೊಳಿಸಬೇಕು ಎಂದು ಅಪೇಕ್ಷಿಸುವುದೂ ಕೂಡ ಹಿಂಸೆಯೇ. ಏಕೆಂದರೆ ಇದರಿಂದ

3ನೇ ಪುಟಕ್ಕೆ

ಮಂತ್ರಾಲಯ ಮಠದ ಹುಂಡಿಯಲ್ಲಿ 22 ದಿನದಲ್ಲಿ 3.04 ಕೋಟಿ ಕಾಣಿಕೆ ಸಂಗ್ರಹ



ರಾಯಚೂರು ಅ.02– ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಹುಂಡಿ ಕಾಣಿಕೆ ಎಣಿಕೆ ಕಾರ್ಯ ಗುರುವಾರ ಪೂರ್ಣಗೊಂಡಿದ್ದು, ಸೆಪ್ಟೆಂಬರ್ ತಿಂಗಳ 22 ದಿನಗಳ ಅವಧಿಯಲ್ಲಿ ಒಟ್ಟು 3,04,37,906 ಕಾಣಿಕೆ ಸಂಗ್ರಹವಾಗಿದೆ.

ಹುಂಡಿ ಎಣಿಕೆ ಕಾರ್ಯ ದೇವಸ್ಥಾನದ ಅಧಿಕಾರಿಗಳು ಹಾಗೂ ಸಿಬ್ಬಂದಿ ನೇತೃತ್ವದಲ್ಲಿ ನಡೆಯಿತು. ಹುಂಡಿಯಲ್ಲಿ 2,96,07,906 ನಗದು ಹಾಗೂ 8,30,000 ಮೌಲ್ಯದ ನಾಣ್ಯಗಳು ಸೇರಿ ಒಟ್ಟು 3,04,37,906 ಸಂಗ್ರಹವಾಗಿದೆ ಹಾಗೂ 48 ಗ್ರಾಂ ಚಿನ್ನ ಹಾಗೂ 285 ಗ್ರಾಂ ಬೆಳ್ಳಿಯು ಸಂಗ್ರಹವಾಗಿದೆ

ಸ್ವಚ್ಛತೆ ಜೀವನದ ಅವಿಭಾಜ್ಯ ಅಂಗ -ಜಿ ಮಲ್ಲಿಕಾರ್ಜುನ



ರಾಯಚೂರು, ಅ.2-ಸ್ವಚ್ಛತೆ ಎನ್ನುವುದು ಮನುಷ್ಯನ ಅವಿಭಾಜ್ಯ ಅಂಗವಾಗಬೇಕು.ನಮ್ಮ ಸುತ್ತಲಿನ ಪರಿಸರ ಶುಚಿತ್ವದಿಂದ ಕೂಡಿದ್ದರೆ ಮಾತ್ರ ಆರೋಗ್ಯದಿಂದ ಇರಲು ಸಾಧ್ಯ ಎಂದು ಶಾಲಾ ಶಿಕ್ಷಣ ಇಲಾಖೆಯಉಪನಿರ್ದೇಶಕರಾದ ಜಿ ಮಲ್ಲಿಕಾರ್ಜುನ್ ಅವರು ಹೇಳಿದರು.

ಅವರಿಂದು ರಾಯಚೂರಿನ ಕೆ.ಇ.ಬಿ ಕಾಲೀನಿಯ ಪಿ ಎಂ ಶ್ರೀ ಶಾಲೆಯಲ್ಲಿ ಹಮ್ಮಿಕೊಂಡಿರುವ ಶ್ರಮದಾನ ಕಾರ್ಯಕ್ರಮವನ್ನು ಸ್ವಚ್ಛತೆಯ ಮಾಡುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತ, ಗಾಂಧೀಜಿಯವರ ಆದರ್ಶ ಅವರ ಜೀವನದ ಮೌಲ್ಯಗಳು ಹಾಗೂ ವಿಚಾರಧಾರೆಗಳನ್ನು ಪ್ರತಿಯೊಬ್ಬರು ಅನುಸರಿಸಬೇಕು. ಸತ್ಯ ಅಹಿಂಸೆ ಮತ್ತು ಪರಿಶ್ರಮ ಮಾರ್ಗದಿಂದ ನಡೆದು ತಮ್ಮ ಕಾರ್ಯ ಚಟುವಟಿಕೆಗಳನ್ನು ತಾವೇ ಮಾಡಿದರೆ ಅದು ಈ ಪರಿಸರಕ್ಕೆ ನೀಡುವ ಅನನ್ಯವಾದ ಕೊಡುಗೆಯಾಗಿರುತ್ತದೆ ಎಂದು ಹೇಳಿದರು. ಇಂದು ರಾಯಚೂರು ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಗಾಂಧಿ ಜಯಂತಿ ಪ್ರಯುಕ್ತ ಶ್ರಮದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು , ಪ್ರತಿ ಶಾಲೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದರ ಮೂಲಕ ಗಿಡಮರಗಳನ್ನು ಬೆಳೆಸುವುದರ ಮೂಲಕ ಆರೋಗ್ಯಕರ ವಾತಾವರಣವನ್ನ ಸೃಷ್ಟಿ ಮಾಡುತ್ತಿದ್ದೇವೆ.

ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಶಿಕ್ಷಕ ಪಾಲಕ ಹಾಗೂ ವಿದ್ಯಾರ್ಥಿ ಪರಿಶ್ರಮ ಪಡಬೇಕು ಎಂದು ಸಲಹೆ

3ನೇ ಪುಟಕ್ಕೆ

ರಾಜೀವ್ ಗಾಂಧಿ ಬಡಾವಣೆಗೆ ರಾಮನಗೌಡ ಭೇಟಿ : 5 ವರ್ಷ ಕಳೆದರೂ ಪುನರ್ವಸತಿ ಪೂರ್ಣಗೊಳ್ಳದೆ ಸಂತ್ರಸ್ತರ ಪರದಾಟ

ಸಮಸ್ಯೆ ಬಗೆಹರಿಸದಿದ್ದರೆ ಪಾಲಿಕೆ, ಜಿಲ್ಲಾಡಳಿತ ಕಚೇರಿ ಎದುರು ಹೋರಾಟದ ಎಚ್ಚರಿಕೆ

ರಾಯಚೂರು ಅ.02– ನಗರದ ವಾರ್ಡ್ ನಂ.30 ಹಾಗೂ 31ರ ರಾಜೀವ್ ಗಾಂಧಿ ನಗರ ಬಡಾ ವಣೆಯ ಸಂತ್ರಸ್ತರ ತಾತ್ಕಾಲಿಕ ವಾಸಸ್ಥಳಗಳಿಗೆ ಜೆಡಿಎಸ್ ಮುಖಂಡ ರಾಮನಗೌಡ ಏಗ ನೂರು ಭೇಟಿ ನೀಡಿ ನಿವಾಸಿಗಳ ಸಮಸ್ಯೆಗಳನ್ನು ಆಲಿಸಿದರು.

2023ರಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಮನೆ ಕುಸಿದು ಇಬ್ಬರು ಬಾಲಕರು ಮೃತಪಟ್ಟ ಹಿನ್ನೆಲೆಯಲ್ಲಿ ಬಡಾವಣೆಯ ಮನೆಗಳನ್ನು ನೆಲಸಮಗೊಳಿಸಲಾಗಿತ್ತು. ಬಳಿಕ ಅಮೃತ ಆಸ್ಪತ್ರೆ ಮುಂಭಾಗದ ಖಾಲಿ ಜಾಗದಲ್ಲಿ ಟಿನ್‌ಶೆಡ್ ನಿರ್ಮಿಸಿ ಕೊಂಡು ಸಂತ್ರಸ್ತರು ವಾಸಿಸುತ್ತಿದ್ದಾರೆ.



ಆದರೆ ಐದು ವರ್ಷಗಳು ಕಳೆದರೂ ಶಾಶ್ವತ ಪುನರ್ವಸತಿ ಪೂರ್ಣಗೊಂಡಿಲ್ಲ ಎಂದು ನಿವಾಸಿಗಳು ದೂರಿದರು.

108 ಕುಟುಂಬಗಳ ಸುಮಾರು 500ರಿಂದ 600 ಮಂದಿ ಸಣ್ಣ ಪ್ರಮಾಣದ ತಾತ್ಕಾಲಿಕ ಮನೆಗಳಲ್ಲಿ ವಾಸಿಸುತ್ತಿದ್ದು, ಕುಟುಂಬದ ಸದಸ್ಯರೆಲ್ಲರೂ ಆರಾಮವಾಗಿ ವಾಸಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ತೆರೆದ ಚರಂಡಿ, ಕುಡಿಯುವ ನೀರಿನ ಕೊರತೆ, ಅಸ್ವಚ್ಛತೆ, ವಿದ್ಯುತ್ ಹಾಗೂ ಮಳೆ–ಬಿಸಿಲಿನಿಂದಾಗಿ ಪ್ರತಿನಿತ್ಯ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಸಂತ್ರಸ್ತರು ಅಳಲು ತೋಡಿಕೊಂಡರು.

ನೆಲಸಮಗೊಳಿಸಿದ ಜಾಗದಲ್ಲಿ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದರೂ ವರ್ಷಗಳು ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಹಲವು ಬಾರಿ ಭರವಸೆ ನೀಡಿದರೂ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ನಿವಾಸಿಗಳು ಆರೋಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಮನಗೌಡ ಏಗನೂರು, "ಮನೆಗಳನ್ನು ನೆಲಸಮಗೊಳಿಸಿ ಐದು ವರ್ಷ ಕಳೆದರೂ ಸಂತ್ರಸ್ತರಿಗೆ ಶಾಶ್ವತ ಸೂರು ಕಲ್ಪಿಸದಿರುವುದು ನೋವಿನ ಸಂಗತಿ. ನೂರಾರು ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಅಮಾನವೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ತಕ್ಷಣ

3ನೇ ಪುಟಕ್ಕೆ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಜಾಕ್ಕೆ ಒತ್ತಾಯಿಸಿ ಪ್ರತಿಭಟನೆ



ರಾಯಚೂರು ಅ.02– ಸಂವಿಧಾನ ವಿರೋಧಿ ಎಸ್‌ಐಆರ್ ರದ್ದುಗೊಳಿಸುವಂತೆ ಹಾಗೂಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ದಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮತದಾರರ ಪಟ್ಟಿಗೆ ಸಂಬಂಧಿಸಿದ ಅನುಮಾನಗಳಿಗೆ ಚುನಾವಣಾ ಆಯೋಗ ಸ್ಪಷ್ಟನೆ ನೀಡಬೇಕು. ಎಸ್‌ಐಆರ್ ಪ್ರಕ್ರಿಯೆಯನ್ನು ಸಮಗ್ರವಾಗಿ ಪರಿಶೀಲಿಸಿ, ಅರ್ಹ ಮತದಾರರ ಹಕ್ಕಿಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದಲಿತರು ಹಾಗೂ ಅಲ್ಪಸಂಖ್ಯಾತರ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ ಎಂಬ ಆರೋಪಗಳ ಕುರಿತು ತನಿಖೆ ನಡೆಸಬೇಕು.

ಎಸ್‌ಐಆರ್ ಹೆಸರಿನಲ್ಲಿ ಮತದಾರರ ಹಕ್ಕು ಕಸಿಯುವ ಪ್ರಯತ್ನ ನಡೆಯಬಾರದು. ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಿ, ಪ್ರತಿಯೊಬ್ಬ ಅರ್ಹ ಮತದಾರನಿಗೂ ತನ್ನ ಹಕ್ಕು ರಕ್ಷಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದರು.

ರಾಜ್ಯದ ಬಾಲ್ಕಿ, ಔರಾದ್, ಬಬಲೇಶ್ವರ, ಕೊಡಗು ಸೇರಿದಂತೆ ವಿವಿಧ ಜಿಲ್ಲೆ, ತಾಲೂಕುಗಳಲ್ಲಿ ಬಿಜೆಪಿ ಕಾರ್ಯಕರ್ತರು ಫಾರ್ಮ್–7 ಸಲ್ಲಿಸಿ ಎಸ್‌ಐಆರ್‌ನಲ್ಲಿ ಹೆಸರುಗಳನ್ನು ಡಿಲೀಟ್ ಮಾಡಿಸುತ್ತಿದ್ದಾರೆ ಎಂದು ಆರೋಪಿಸಲಾಯಿತು.

ಈ ಅರ್ಜಿಗಳನ್ನು ರಾಜಕೀಯ ಹಸ್ತಕ್ಷೇಪವಿಲ್ಲದೆ ಪರಿಶೀಲಿಸಬೇಕು ಹಾಗೂ ಅರ್ಹ ಮತದಾರರ ಹೆಸರು ಕೈಬಿಡುವ ಮುನ್ನ ಸ್ಥಳ ಪರಿಶೀಲನೆ ಮತ್ತು ಸಂಬಂಧಪಟ್ಟವರಿಗೆ ನೋಟಿಸ್ ನೀಡಬೇಕು.

ಫಾರ್ಮ್–7 ಮೂಲಕ ಬಂದ ಅರ್ಜಿಗಳು, ಪರಿಶೀಲನೆ ಹಾಗೂ ಹೆಸರುಗಳನ್ನು ತೆಗೆದುಹಾಕಿರುವ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಚುನಾವಣಾ ಆಯೋಗ ಸಾರ್ವಜನಿಕಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಹಾಗೂ ಬಂಧನಕ್ಕೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು.

3ನೇ ಪುಟಕ್ಕೆ

ದಿ.4ರಂದು ಶ್ರೀಮತಿ ಲಕ್ಷ್ಮಿದೇವಿ ಶಾಸ್ತ್ರಿಯವರ ಸಪ್ತ ಕೃತಿಗಳ ಬಿಡುಗಡೆ

ರಾಯಚೂರು,ಅ. 2-ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು ವಿಶ್ವ ಪ್ರಕಾಶನ ಸಹಯೋಗದೊಂದಿಗೆ ದಿ. 4ರಂದು ಕನ್ನಡ ಭವನದಲ್ಲಿ ಲಕ್ಷ್ಮಿದೇವಿ ಶಾಸ್ತ್ರಿಯವರ ಸಪ್ತ ಕೃತಿಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಕಾಶಕರು ಹಾಗೂ ಬೆಂಗಳೂರಿನ ಇನ್ಫೋಸಿಸ್ ಹಿರಿಯ ಅಭಿಯಂತರರಾದ ವಿಶ್ವನಾಥ್ ಶಾಸ್ತ್ರಿ ಹೇಳಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,

ಕಾರ್ಯಕ್ರಮದ ,ಉದ್ಘಾಟಕರಾಗಿ ಶಾಮಸುಂದರ ಬಿದರಕುಂದಿ, ಹಿರಿಯ ಸಾಹಿತ್ಯ ವಿದ್ವಾಂಸಕರು, ಹುಬ್ಬಳ್ಳಿ ಆಗಮಿಸಲಿದ್ದಾರೆ.

ಕೃತಿ ಪರಿಚಯ ತುಂಗಭದ್ರೆಯ ಆಯುರ್ವೇದದಿಂದ ಆರೋಗ್ಯ ಕೆಂಗಿಣ್ಣಿಡ ದೇಶವಿದೇಶಿಯರು ಮಾಡಲಿದ್ದಾರೆ.

ಕೃತಿಗಳ ಲೋಕಾರ್ಪಣೆಯನ್ನು ಡಾ. ಅಮರೇಶ್ ಯತಗಲ್ ಕುಲಸಚಿವರು, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

3ನೇ ಪುಟಕ್ಕೆ

ಆರ್ ಟಿ ವಿ ಕನ್ನಡ ಡಿಜಿಟಲ್ ವಾಹಿನಿಯ ನಾಲ್ಕನೆಯ ವರ್ಷದ ಸಂಭ್ರಮಾಚರಣೆಯ ಅಂಗವಾಗಿ ಶಿಕ್ಷಕರಿಗೆ ಶಿಕ್ಷಣ ರತ್ನ ಪ್ರಶಸ್ತಿ,ಕುಮಾರಿ ಡಾಕ್ಟರ್ ಮಂಜುಳಾ ಇವರಿಗೆ ವೈದ್ಯರತ್ನ ಪ್ರಶಸ್ತಿ ಪ್ರದಾನ



ಹಟ್ಟಿ ಚಿನ್ನದ ಗಣಿ:

ಹಿರೇನಗನೂರಿನ ಸರಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನಾಚರ 'ಣೆಯ ಕಾರ್ಯಕ್ರಮವು ಅದ್ದೂರಿಯಾಗಿ ನಡೆಯಿತು.ಮೊದಲಿಗೆ ಶಿಕ್ಷಕಿ ಶ್ರೀಮತಿ ಸುರೇಖಾ ಪ್ರಾರ್ಥನೆ ಗೀತೆಯೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮವು ನಂತರ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.ನಂತರ ಆನ್ವರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಹಿರೇನಗನೂರು, ಆನ್ವರಿ,ಚುಕ್ಕನಟ್ಟಿ ಹಾಗೂ ವಂದಲಿ ಹೊಸೂರು ಗ್ರಾಮಗಳ ಸರಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಾದ ಆರೋಗ್ಯಪ್ಪ ಸರಕಾರಿ ಪ್ರೌಢಶಾಲೆ ಆನ್ವರಿ.ಶ್ರೀಮತಿ ಫಿಲೋಮಿನಾ ಸ ಶಿ ಹಿರಿಯ ಪ್ರಾಥಮಿಕ ಶಾಲೆ ಆನ್ವರಿ,ಶ್ರೀಮತಿ ಭವಾನಿ ಕೆ.ಸ ಶಿ ವಂದಲಿ ಹೊಸುರು.ಶ್ರೀಮತಿ ವೀಣಾ ಸ ಶಿ ಕಿರಿಯ ಪ್ರಾಥಮಿಕ ಶಾಲೆ ಚುಕ್ಕನಟ್ಟಿ.ಶ್ರೀ ಬಸವರಾಜ ಸ ಶಿ ಉನ್ನತಿಕರಿಸಿದ ಹಿ,ಪ್ರಾ,ಶಾಲೆ ಹಿರೇನಗನೂರು ಈ ಎಲ್ಲಾ ಶಿಕ್ಷಕರಿಗೆ ಶಿಕ್ಷಣ ರತ್ನ ಪ್ರಶಸ್ತಿಯನ್ನು ಹಾಗು ವೈದ್ಯಕೀಯ ಶಿಕ್ಷಣದ ನೀಟ್ ಪಿ ಜಿ ಪರೀಕ್ಷೆಯಲ್ಲಿ 1737 ನೇ ಸ್ಥಾನ ಪಡೆದು ಅದ್ಭುತ ಸಾಧನೆ ಮಾಡಿದ ಹಿರೇನಗನೂರಿನ ಕೀರ್ತಿಯನ್ನು ಹಳ್ಳಿಯಿಂದ ದಿಲ್ಲಿವರೆಗೆ ಪಸರಿಸಿದ ನಮ್ಮ ಹೆಮ್ಮೆಯ ಕುವರಿ ಡಾಕ್ಟರ್ ಮಂಜುಳಾ ಬಸವರಾಜ್ ಬೂದಿನಾಳ ಇವರಿಗೆ ಆರ್ ಟಿ ವಿ ಕನ್ನಡ ಡಿಜಿಟಲ್ ವಾಹಿನಿಯ ವ್ಯವಸ್ಥಾಪಕರಾದ ಮಧುಶ್ರೀ ಹಾಗೂ ಕಾರ್ಯಕ್ರಮದ ಆಯೋಜಕರಾದ ಸಮಾಜ ಸೇವಕ ಶಿಕ್ಷಣ ಪ್ರೇಮಿಗಳಾದ ಶ್ರೀ ಮೌನದ್ದೀನ್ ಬೂದಿನಾಳ್ ಹಾಗೂ ವೇದಿಕೆಯ ಮೇಲಿರುವ ಗಣ್ಯರಾದ ಕಾರ್ಯಕ್ರಮದ ಅಧ್ಯಕ್ಷತೆಯ ೦ನ್ನುವಹಿಸಿದ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ ಇನ್ನುಳಿದ ಮುಖ್ಯ ಅತಿಥಿಗಳಾಗಿ ನರಸಪ್ಪ ಯಾದವ್ ಅಧ್ಯಕ್ಷರು ವಿನಾಯಕ ವಿದ್ಯಾ ಸಂಸ್ಥೆ ಹಟ್ಟಿ,ಗಂಗಾಧರ್ ಸಿ ಆರ್ ಪಿ,ಶ್ರೀ ಮಲ್ಲಪ್ಪ ನಿವೃತ್ತ ಮುಗು ನಿಲೋಗಲ್,ಶ್ರೀ ಹನುಮಂತ ನಿವೃತ್ತ ಎಲ್ಐಸಿ ಅಧಿಕಾರಿಗಳು ಚುಕ್ಕನಟ್ಟ,ಶ್ರೀ ತಿಮ್ಮನಗೌಡ ಪೊಲೀಸ್ ಪಾಟೀಲ್ ಮಾಜಿ ತಾಲೂಕು ಪಂಚಾಯತ್ ಸದಸ್ಯರು ಶಿವನಗೌಡ ನಗರ ಪಿಎಲ್ ಡಿ ಬ್ಯಾಂಕ್ ನಿರ್ದೇಶಕರು, ವಿರೂಪಾಕ್ಷಪ್ಪ ಮಾಲಿ ಪಾಟೀಲ್ ಭೂದಾನಿಗಳು,ಶಂಕ್ರಪ್ಪಸಕ್ರಿ ಮುಗು ಆನ್ವರಿ,ಅಬ್ರಹಾಮ್ ಸಲಬೂರು, ಯೋಗಪ್ಪ ದೊಡ್ಮನಿ,ಶ್ರೀ ವೆಂಕಟ 'ಶ ಮು ಗು ಟಾಗೋರ್ ಸ್ಮಾರಕ ಶಾಲೆ ಗೆಜ್ಜಲಗಟ್ಟ,ಆರೋಗ್ಯಪ್ಪ ನಿವೃತ್ತ ಶಿಕ್ಷಕರು, ಮೌಲಸಾಬ್ ಶಿಕ್ಷಣ ಪ್ರೇಮಿ ಹಟ್ಟಿ,ದಾದಾಪೀರ್ ಮಾಜಿ ಗ್ರಾ ಪಂ ಸದಸ್ಯ,ಇವರ ಸಮ್ಮುಖದಲ್ಲಿ ಶಿಕ್ಷಕರಿಗೆ ಶಿಕ್ಷಣ ರತ್ನ ಪ್ರಶಸ್ತಿ ವೈದ್ಯರಿಗೆ ವೈದ್ಯರತ್ತ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಹಟ್ಟಿ ಚಿನ್ನದ ಗಣಿಯ ಶ್ರೀ ವಿನಾಯಕ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ನರಸಪ್ಪ ಯಾದವ್ ಮಾತನಾಡಿ ವಿದ್ಯಾರ್ಥಿಗಳ ಕಲಿಕೆಗೆ ಒಂದು ಉತ್ತಮವಾದ ಪರಿಸರ ಬೇಕು ಅಂತಹ ಪರಿಸರವನ್ನು ಇಲ್ಲಿನ ಮುಖ್ಯ ಗುರುಗಳು ಶಿಕ್ಷಕರು ಎಸ್ ಡಿ ಎಮ್ ಸಿ ಅಧ್ಯಕ್ಷರು ಸೇರಿ ಒಳ್ಳೆಯ ಪರಿಸರ ಮಾಡಿದ್ದಾರೆ.ತುಂಬಾ ಸಂತೋಷ.ನಂತರ ಶಿಕ್ಷಕರಿಗೆ ಕಿವಿಮಾತು ಹೇಳುತ್ತಾ ನಾವು ಯಾವ ಉದ್ದೇಶಕ್ಕೆ ಇಲ್ಲಿಗೆ ಬಂದಿದ್ದೇವೆ ಗೊತ್ತಿಲ್ಲ ಆದರೆ ವೃತ್ತಿ ಧರ್ಮವನ್ನು ಉದಾರ ಪೋಷಣೆಗಾಗಿ ಆಯ್ಕೆ ಮಾಡಿಕೊಂಡಿದ್ದೇವೆ.ಉದಾಹರಣೆಗೆ ನಾವು ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು,ಲಾಯರ್ ಆಗಬೇಕು,ಟೀಚರ್ ಆಗಬೇಕು ಏನೋ ಒಂದು ಉದ್ದೇಶ ಇಟ್ಟುಕೊಂಡು ಇಲ್ಲಿಗೆ ಬಂದು ತಂದು ನಿಲ್ಲಿಸಿದೆ ? ಆದರೆ ಈ ವೃತ್ತಿಯನ್ನು ನಾವು ಮೊದಲು ಪ್ರೀತಿಸಬೇಕು,ಬರುವ ದಾರಿ ಅನಿವಾರ್ಯವಾಗಿರಬಹುದು,ಆಯ್ಕೆ ಏನಿದೆ ಅದು ನಮ್ಮ ಅದೃಷ್ಟ,ಅದಕ್ಕೆ ನಾವು ಪ್ರೀತಿಸಬೇಕು ಗೌರವಿಸಬೇಕು ಇದರಲ್ಲಿ ಅರ್ಪಣಾ ಮತ್ತು ಸೇವಾ ವ'ಂನೋಭಾವ'ನೆಯ ಲ್ಲಿ ತೊಡಗಬೇಕು ಅಂದಾಗ ಒಬ್ಬ ಶಿಕ್ಷಕ ಉತ್ತಮ ಶಿಕ್ಷಕನಾಗಿ ಬೆಳೆಯುವುದಕ್ಕೆ ಸಾಧ್ಯವಿದೆ ಹಾಗೂ ವೃತ್ತಿ ಗೌರವವನ್ನು ಕಾಪಾಡಬೇಕು. ವಿದ್ಯಾರ್ಥಿಗಳು ಪರೀಕ್ಷೆ ದೃಷ್ಟಿಯಿಂದ ಓದಬಹುದು ಅಷ್ಟೇ.ಈ ಪ್ರಶ್ನೆ ಪರೀಕ್ಷೆಯಲ್ಲಿ ಬರುವುದಿಲ್ಲ ಅಂದರೆ ಆ ವಿದ್ಯಾರ್ಥಿಗಳು ಅದನ್ನು ಓದುವುದಿಲ್ಲ.ಪರೀಕ್ಷೆ ದೃಷ್ಟಿಯಲ್ಲಿ ಆ ಪ್ರಶ್ನೆ ಬಂದೇ ಬರುತ್ತದೆ ಅಂದರೆ ಮಕ್ಕಳು ಅನೇಕ ಕಾಲ ಓದುತ್ತಾರೆ.ಆದರೆ ಅವರ ಅಧ್ಯಯನ ಕೇವಲ ಪರೀಕ್ಷೆ ದೃಷ್ಟಿಯಿಂದ ಆಗಿರುತ್ತದೆ.ಆದರೆ ಒಬ್ಬ ಶಿಕ್ಷಕ ನಿಜವಾಗಿ ಒಬ್ಬ ವಿದ್ಯಾರ್ಥಿ ಆಗ'ುತ್ತಾನೆ.ನಿರ'ಂತ'ರ'ವಾಗಿ ಓದಬೇಕು ಅದು ಹೇಗೆ ಅಂದರೆ ತಾಯಿಯ ಗರ್ಭದಿಂದ ಗೋರಿಯವರೆಗೆ ಕಲಿಯಬೇಕು ಇಲ್ಲಿಗೆ ಮುಗಿಯಿತು ಅನ್ನುವುದಿಲ್ಲ ಕಲಿಕೆ ಒಂದು ಪರಿಪೂರ್ಣ ಇಲ್ಲಿಗೆ ಮುಗೀತು ಅನ್ನುವುದು ಇರುವುದಿಲ್ಲ ನಿರಂತರ ಪ್ರಕ್ರಿಯೆ ಅದಕ್ಕೆ ನಾವು ಓದಬೇಕು ಇವತ್ತು ಬದಲಾಗುವ ಪರಿಸ್ಥಿತಿಯಲ್ಲಿ ಯಾವುದು ಶಾಶ್ವತ ಅಂದರೆ ಬದಲಾವಣೆ ಮಾತ್ರ ಶಾಶ್ವತ.

ಹಳ್ಳಿಗಳಲ್ಲಿ ಪಾಠ ಮಾಡುವುದು ಅಷ್ಟು ಸುಲಭವಲ್ಲ ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ನೂರಕ್ಕೆ 90ರಷ್ಟು ಬಾಲಕರು ಅನಕ್ಷರಸ್ಥರಿದ್ದಾರೆ.ಮಕ್ಕಳು ಸರಿಯಾಗಿ ಶಾಲೆಗೆ ಬರುತ್ತಿಲ್ಲ ಅಂತದರಲ್ಲಿ ದೃಢ ನಿರ್ಧಾರ ಮಾಡಿಕೊಂಡು ಶಿಕ್ಷಕರು ಪರಿಪೂರ್ಣವಾಗಿ ತೊಡಗಿಸಿಕೊಂಡು ಮಕ್ಕಳ ಕ್ಷೇಮ ಅಭಿವೃದ್ಧಿಗಾಗಿ ಕಲಿಸಬೇಕಾಗುತ್ತದೆ ಅಂತಹ ಶಿಕ್ಷಕರನ್ನು ಗುರುತಿಸಿ ಅವರಿಗೆ ಶಿಕ್ಷಣ ರತ್ನ ಪ್ರಶಸ್ತಿ ನೀಡಿ ಗೌರವಿಸಿದ ಆರ್‌ಟಿವಿ ಕನ್ನಡ ವಾಹಿನಿಯವರಿಗೂ ಹಾಗೂ ಕಾರ್ಯಕ್ರಮದ ಆಯೋಜಕರಾದ ಮೌನದ್ದೀನ್ ಬೂದಿನಾಳ್ ರವರಿಗೂ ಹಾಗು ಶಾಲೆಯ ಮುಖ್ಯ ಗುರುಗಳನ್ನು ಹಾಗೂ ಶಿಕ್ಷಕ ವೃಂದವನ್ನು ಈ ಸಂದರ್ಭದಲ್ಲಿ ಸ್ಮರಿಸಿರು.

ಅದೇ ರೀತಿ ನೂರುತ್ತಾ ಶಿಕ್ಷಕ ಶ್ರೀ ಮಲ್ಲಪ್ಪ ನಿಲೋಗಲ್ ಹಾಗು ಆನ್ವರಿ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶಂಕರಪ್ಪ ಸಕ್ರಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕರಾದ ಮುಸ್ತಾಕ್ ಅಹಮದ್,ರವೀಂದ್ರ ಸ್ವ,ನಾಗರಾಜ್, ನೆರವೇರಿಸಿದರು.



ಸ್ವಚ್ಛತೆಯ ಅರಿವು ಪ್ರತಿಯೊಬ್ಬರಲ್ಲೂ ಮೂಡಬೇಕು : ಸಿಇಒ

ಬಾಗಲಕೋಟೆ,ಅ.01-

ಸ್ವಚ್ಛತೆ ಬಗ್ಗೆ ಪ್ರತಿಯೊಬ್ಬರೂ ಅರಿವು ಹೊಂದಿ, ಸಾರ್ವಜನಿಕರ ಸ್ಥಳಗಳು ಹಾಗೂ ಪ್ರವಾಸಿ ತಾಣಗಳನ್ನು ಸ್ವಚ್ಛವಾಗಿಡುವ ಜವಾಬ್ದಾರಿಯನ್ನು ವಹಿಸಬೇಕು ಎಂದು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಹೇಳಿದರು.

ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಹಮ್ಮಿಕೊಂಡ ಸ್ವಚ್ಚತಾ ಹೀ ಸೇವಾ ಅಭಿಯಾನ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಸ್ವಚ್ಛತೆ ಕೇವಲ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಲ್ಲ. ಸಾರ್ವಜನಿಕರೂ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಲು ಸಕ್ರಿಯವಾಗಿ ಕೈಜೋಡಿಸಬೇಕು. ಎಲ್ಲಂದರಲ್ಲಿ ಪ್ಲಾಸ್ಟಿಕ್ ಹಾಗೂ ತ್ಯಾಜ್ಯವನ್ನು ಎಸೆಯು ವುದರಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಹೀಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷವಾಗಿ ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಳಕೆ ಸಾಧ್ಯವಾದಷ್ಟು ತಪ್ಪಿಸಬೇಕು ಎಂದರು.

ಮನೆಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಮೂಲ ದಲ್ಲಿಯೇ ಹಸಿ ಕಸ ಮತ್ತು ಒಣ ಕಸ ಎಂದು ವಿಂಗಡಿಸಿ ಸ್ಥಳೀಯ ಸಂಸ್ಥೆಗಳ ತ್ಯಾಜ್ಯ ಸಂಗ್ರಹಾಣ ವ್ಯವಸ್ಥೆಗೆ ನೀಡಬೇಕು. ಇದರಿಂದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಹಾಗೂ ಮರುಬಳಕೆಗೆ ಅನುಕೂಲವಾಗಲಿದೆ. ಸಾರ್ವಜನಿಕರು ಕಸ ವಿಂಗಡಣೆಯ ಅಭ್ಯಾಸವನ್ನು ದೈನಂದಿನ ಜೀವನದ ಭಾಗವನ್ನಾಗಿ ಮಾಡಿಕೊಳ್ಳಬೇಕು ಎಂದು ಸಿಇಒ ಗಜಾನನ ಬಾಲೆ ಕರೆ ನೀಡಿದರು.

ಸ್ವಚ್ವತಾ ಹೀ ಸೇವಾ ಅಭಿಯಾನದಡಿ ಜಿಲ್ಲೆಯ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸ್ವಚ್ಛತೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಸ್ವಚ್ಛ ಪರಿಸರ ನಿರ್ಮಾಣಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು. ನಂತರ ದೇವಸ್ಥಾನದ ಆವರಣದಲ್ಲಿ ಗಿಡಗಳನ್ನು ನಡೆಲಾಯಿತು.

ಶ್ರಮದಾನದಲ್ಲಿ ಸಿಇಓ ಭಾಗಿ

ಸ್ವಚ್ಚತಾ ಹೀ ಸೇವಾ ಅಭಿಯಾನದ ಅಂಗವಾಗಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಸೇರಿದಂತೆ ಮುಚಖಂಡಿ ದೇವಸ್ಥಾನದ ಮುಖ್ಯ ಅರ್ಚಕರಾದ ಪ್ರಭು ಸ್ವಾಮಿಗಳು, ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಅಲ್ಲಾಪೂರ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಸ ಸಂಪಗಾವಿ ಅವರು ಸ್ವತಃ ಶ್ರಮದಾನದಲ್ಲಿ ಪಾಲ್ಗೊಂಡು ದೇವಸ್ಥಾನದ ಆವರಣದಲ್ಲಿ ಸ್ವಚ್ಚತಾ ಕಾರ್ಯ ಕೈಗೊಂಡರು. ಕಾರ್ಯಕ್ರಮದಲ್ಲಿ ನೀರಲಕೇರಿ ಜಿಲ್ಲಾ ಪಂಚಾಯತಿಯ ಆಡಳಿತಾಧಿಕಾರಿ ಪ್ರದೀಪ ಯಾವಗಲ್ಲ, ಗ್ರಾಮ ಪಂಚಾಯತ ಅಭಿವೃದ್ದಿ ಅಧಿಕಾರಿ ರತ್ನಾ ಮೂಕಿ ಸೇರಿದಂತೆ ಜಿಲ್ಲಾ ಹಾಗೂ ಬಾಗಲಕೋಟೆ ತಾಲೂಕಾ ಪಂಚಾಯತ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಹಾಗೂ ಕ್ರೀಡಾಪಟುಗಳು ಸ್ವಚ್ಚತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ತಾಯಂದಿರ ಆರೋಗ್ಯ ರಕ್ಷಣೆಗೆ ಪೌಷ್ಟಿಕ ಆಹಾರ, ಸುರಕ್ಷಿತ ಗರ್ಭಪಾತ ಸೇವೆ ಅಗತ್ಯ



ಕೊಪ್ಪಳ,ಅ.01-

ತಾಯಂದಿರ ಆರೋಗ್ಯ ರಕ್ಷಣೆಗೆ ಪೌಷ್ಠಿಕ ಆಹಾರ ಹಾಗೂ ಸುರಕ್ಷಿತ ಗರ್ಭಪಾತ ಸೇವೆ ಅಗತ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಗಳಾದ ಮಹಾಂತೇಶ ಎಸ್. ದರಗದ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ಹಾಗೂ ಹಿರೇಸಿಂದೋಗಿ ಸಮುದಾಯ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಕೋಳೂರು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಬುಧವಾರ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಸುರಕ್ಷಿತ ಗರ್ಭಪಾತ ಸೇವೆಗಳ ದಿನ ಹಾಗೂ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅರ್ಹ ಹಾಗೂ ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿಯಿಂದ, ಸೂಕ್ತ ಆಸ್ಪತ್ರೆಯ ವಾತಾವರಣದಲ್ಲಿ ವೈಜ್ಞಾನಿಕವಾಗಿ ಅನುಮೋದಿತ ವಿಧಾನಗಳ ಮೂಲಕ ಪಡೆಯುವ ಗರ್ಭಪಾತವೇ ಸುರಕ್ಷಿತ ಗರ್ಭಪಾತ. ಒಗ್ಗಟ್ಟಿನ ಕಾರ್ಯಾಚರಣೆ: ಎಲ್ಲರಿಗೂ ಆಯ್ಕೆ ಮತ್ತು ಸೇವೆಗಳ ಲಭ್ಯತೆಯನ್ನು ಸಬಲೀಕರಣಗೊಳಿಸುವುದು' ಎಂಬ ಧ್ಯೇಯದೊಂದಿಗೆ ಮಹಿಳೆಯರ ಲೈಂಗಿಕ ಮತ್ತು ಸಂತಾನೋತ್ಪತ್ತಿ ಹಕ್ಕುಗಳನ್ನು ರಕ್ಷಿಸಲು ಈ ಜಾಗೃತಿ ಮೂಡಿಸಲಾಗುತ್ತಿದೆ. ಮಹಿಳೆಯರ ಆರೋಗ್ಯ ರಕ್ಷಣೆ ಮತ್ತು ತಾಯಂದಿರ ಮರಣ ಪ್ರಮಾಣ ತಡೆಗಟ್ಟುವಲ್ಲಿ ಸುರಕ್ಷಿತ ಗರ್ಭಪಾತ ಸೇವೆಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಕೊಪ್ಪಳ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಕೆ. ಮಾತನಾಡಿ, 'ಸರಿಯಾದ ಪೋಷಣೆ, ಸದೃಢ ಮಗು, ಸಮೃದ್ಧ ಭಾರತ' ಎಂಬ ಧ್ಯೇಯವಾಕ್ಯದೊಂದಿಗೆ ಪೋಷಣ್ ಮಾಸಾಚರಣೆ ಹಮ್ಮಿಕೊಳ್ಳಲಾಗಿದೆ. ಗರ್ಭಿಣಿಯರು ಹಾಗೂ ತಾಯಂದಿರು ಸ್ಥಳೀಯವಾಗಿ ಸಿಗುವ ಹಣ್ಣು, ಸೊಪ್ಪು, ತರಕಾರಿ, ಮೊಳಕೆ ಕಾಳುಗಳು ಮತ್ತು ಸಿರಿಧಾನ್ಯಗಳನ್ನು ದಿನನಿತ್ಯದ ಆಹಾರದಲ್ಲಿ ಬಳಸಬೇಕು. ಅಡುಗೆಯ ಕೊನೆಯಲ್ಲಿ ಅಯೋಡಿನ್ ಯುಕ್ತ ಉಪ್ಪನ್ನು ಬಳಸುವುದರ ಜೊತೆಗೆ ಮನೆಯ ಶುದ್ಧ ಆಹಾರಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಶಿಕ್ಷಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ಗರ್ಭಿಣಿಯರು, ಬಾಣಂತಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರು ಸಮಾಜದ ಅಮೂಲ್ಯ ಆಸ್ತಿ



ಗಂಗಾವತಿ,ಅ.01-

ಹಿರಿಯ ನಾಗರಿಕರು ಸಮಾಜದ ಅಮೂಲ್ಯ ಆಸ್ತಿ. ಅವರ ಅನುಭವ, ಜ್ಞಾನ ಮತ್ತು ಮಾರ್ಗದರ್ಶನವನ್ನು ಯುವ ಪೀಳಿಗೆ ಗೌರವಿಸಬೇಕೆಂದು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ವೇದಮೂರ್ತಿ ಬಿ.ಎಸ್. ಹೇಳಿದರು.

ನಗರದ ಮಂಥನ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಗಂಗಾವತಿ, ವಕೀಲರ ಸಂಘ , ತಾಲೂಕು ಆಡಳಿತ, ತಾಲೂಕು ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ಕರುಣಾ ರೂರಲ್ ಡೆವಲಪ್ಮೆಂಟ್ ಸೊಸೈಟಿ ಇವರ ಸಂಯುಕ್ತ ಆಶ್ರ ಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮನೆಯಲ್ಲಿ ತಂದೆ-ತಾಯಿ, ಅಜ್ಜ-ಅಜ್ಜಿಯರನ್ನು ಮಾನವೀಯತೆ ಹಾಗೂ ಗೌರವದಿಂದ ನೋಡಿಕೊಳ್ಳುವುದರ ಜೊತೆಗೆ, ಸಾರ್ವಜನಿಕ ಸ್ಥಳಗಳಲ್ಲಿಯೂ ಹಿರಿಯ ನಾಗರಿಕರಿಗೆ ಆದ್ಯತೆ ಹಾಗೂ ಗೌರವ ನೀಡಬೇಕು ಎಂದರು.

ಹಿರಿಯ ನಾಗರಿಕರ ಬಗ್ಗೆ ಯುವ ಸಮುದಾಯದಲ್ಲಿ ಗೌರವ ಮತ್ತು ಜವಾಬ್ದಾರಿಯ ಮನೋಭಾವ ಬೆಳೆಸುವ ಉದ್ದೇಶದಿಂದ ವಿಶ್ವ ಹಿರಿಯ ನಾಗರಿಕರ ದಿನಾಚರ ಣೆಯನ್ನು ಆಚರಿಸಲಾಗುತ್ತಿದೆ. ಹಿರಿಯರು ತಮ್ಮ ಜೀವನದ ಅನು ಭವ ಹಾಗೂ ಜ್ಞಾನದಿಂದ ಕುಟುಂಬ ಮತ್ತು ಸಮಾಜದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಆದ್ದರಿಂದ ಅವರನ್ನು ನಿರ್ಲಕ್ಷಿಸದೆ ಪ್ರೀತಿ, ಗೌರವ ಮತ್ತು ಕಾಳಜಿಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಹಿರಿಯ ನಾಗರಿಕರು ಬ್ಯಾಂಕ್ ಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ವಿವಿಧ ಸಾರ್ವಜನಿಕ ಸೇವಾ ಕೇಂದ್ರಗಳಿಗೆ ಭೇಟಿ ನೀಡಿದಾಗ ಅವರ ಕೆಲಸಗಳನ್ನು ತ್ವರಿತವಾಗಿ ಪೂರ್ಣ ಗೊಳಿಸುವ ಮೂಲಕ ಅವರಿಗೆ ಅಗತ್ಯ ವಾದ ಗೌರವ ಹಾಗೂ ಸಹಕಾರ ನೀಡಬೇಕು. ಹಿರಿಯ ನಾಗರಿಕರಿಗೆ ಅನುಕೂಲವಾಗುವಂತೆ ಸರ್ಕಾರಿ ಕಚೇರಿಗಳಲ್ಲಿ ಪ್ರತ್ಯೇಕ ಕೌಂಟರ್‌ಗಳ ವ್ಯವಸ್ಥೆ ಕಲ್ಪಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಅತಿಥಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ನಾಗೇಶ್ ಪಾಟೀಲ್ ಮಾತನಾಡಿ ಹಿರಿಯ ನಾಗರಿಕರಿಗೆ ಎಲ್ಲರು ಗೌರವಿಸ ಬೇಕು ಜೊತೆಗೆ ಹಿರಿಯ ನಾಗರಿಕರಿಗೆ ಸರಕಾರರ ಜಾರಿಗೆ ತಂದಿರುವ ಯೋಜನೆಗಳನ್ನು ಸದಪಯೋಗ ಪಡಿಸಿಕೊಳ್ಳ ಬೇಕೆಂದರು.

ವಕೀಲರ ಸಂಘದ ಕಾರ್ಯದರ್ಶಿ ನ್ಯಾಯವಾದಿ ಎಚ್.ಎಂ. ಮಂಜುನಾಥ ಸ್ವಾಮಿ ಮಾತನಾಡಿ ಹಿರಿಯನಾಗರಿಕರು ವಯಸ್ಸು ಆಗಿದೆ ಎಂದು ಬೇಜಾರು ಮಡಿಕೊಳ್ಳ ಬೇಡಿರಿ. 50 ವರ್ಷಕ್ಕೆ ಆರೋಗ್ಯ ನೋಡಿಕೊಳ್ಳಿ, 60 ವರ್ಷಕ್ಕೆ ನಿವೃತ್ತಿ ಜೀವನ ಪಡೆದುಕೊಳ್ಳಿರಿ, 70 ವರ್ಷಕ್ಕೆ ಸಂತೋಷದಿಂದ ರುವದರ ಮೂಲಕ ಬಂದು ವರ್ಗದವರ ಜೊತೆ ಅನ್ಯೂನ್ಯವಾಗಿರಿ ಎಂದು ತಿಳಿಸಿದರು. ತಂದೆ ,ತಾಯಿ ಅವರನ್ನು ಮಕ್ಕಲು ಸರಿಯಾದ ರೀತಿಯ ಪೋಷಿಸ ಇದ್ದರೆ ವರಿಗೆ ನೀಡಿರುವ ಸೌಲಭ್ಯಗಳನ್ನು ವಾಪಸ್ಸು ಪಡೆಯುವ ಹಕ್ಕು ಪಾಲಕರಿಗೆ ಇದೆ ಎಂದು ಮಾಹಿತಿ ನೀಡಿದರು. ಈ ವೇಳೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮರೆಡ್ಡಿ ಪಾಟೀಲ್, ಗಂಗಾವತಿ ವಕೀಲರ ಸಂಘದ ಅಧ್ಯಕ್ಷ ಶರಣಬಸಪ್ಪ ನಾಯಕ, ಉಪಾಧ್ಯಕ್ಷ ಪ್ರಕಾಶ್ ಎಂ. ಕುಸಬಿ, ಶಿಶು ಅಭಿವೃದ್ದಿ ಯೋಜನಾಧಿಕಾರಿ ಶಿವಶರಣಪ್ಪ ಗದ್ದಿ, ಸಹಾಯಕ ಶಿಶು ಅಭಿವೃದ್ದಿ ಯೋಜನಾಧಿಕಾರಿ ಪ್ರಸನ್ನ ಕುಮಾರ್, ತಹಸೀಲ್ದಾರ್ ವೆಂಕಟೇಶ್ ಆಶ್ರೀತ್ , ಕರುಣಾ ರೂರಲ್ ಸಂಸ್ಥೆಯ ಅಧ್ಯಕ್ಷಡಾ. ಸಿ. ಮಹಾಲಕ್ಷ್ಮಿ, ಕಾರ್ಯದರ್ಶಿ ಅಶೋಕ ಪಾಟೀಲ್ , ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಚಕ್ರಪಾಣಿರಾವ್. ವಿಕಲ ಚೇತನರ ಸಂಘದ ಮಂಜುನಾಥ ಹೊಸಕೇರಿ, ಮಂಜುಳಾ, ಉಪಸ್ಥಿತರಿದ್ದರು.

ವಿಶ್ವ ಹಿರಿಯ ನಾಗರೀಕರ ದಿನಾಚರಣೆ ಶ್ರದ್ಧಾ, ಉತ್ಸಾಹದಿಂದ ಆಚರಣೆ



ಯಾದಗಿರಿ,ಅ.01-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದ ಡಿ. ವಿಶ್ವನಾಥರೆಡ್ಡಿ ಮುದ್ದಾಣಾ ಸಭಾ ಭವನದಲ್ಲಿಂದು (ಗುರುವಾರ) ವಿಶ್ವ ಹಿರಿಯ ನಾಗರಿಕರ ದಿನಾಚರಣೆ 2026 ಅನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ತಿಪ್ಪಣ್ಣ ಸಿರಸಗಿ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶರಣಪ್ಪ ಪಾಟೀಲ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಯಾದಗಿರಿ. ಮಂಜನಗೌಡ ಪಾಟೀಲ್, ಪೊಲೀಸ್ ಸಬ್‌ಇನ್‌ಸ್ಪೆಕ್ಟರ್, ನಗರ ಪೊಲೀಸ್ ಠಾಣೆ, ಯಾದಗಿರಿ. ಮಲ್ಲಿಕಾರ್ಜುನ, ಜಿಲ್ಲಾ ಅಧ್ಯಕ್ಷರು, ಸರ್ಕಾರಿ ನಿವೃತ್ತ ನೌಕರರ ಸಂಘ, ಯಾದಗಿರಿ. ಅಜಿತ್ ರಾಜ್ ದೊಖಾ, ಅಧ್ಯಕ್ಷರು, ಬಾಲಾಜಿ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆ, ಯಾದಗಿರಿ. ಸಾಹೇನ ಜಾನಿ, ಅಧ್ಯಕ್ಷರು, ತಾಲೂ ಕು ಅಂಗವಿಕಲರ ಕ್ಷೇಮಾಭಿ ವೃದ್ಧಿ ಸಂಘ, ಶಹಾಪುರ. ಸೂರ್ಯಕಾಂತ ಕರಡಳ್ಳಿ ಹಾಗೂ ಸಿ.ಎಮ್. ಪಟ್ಟೇದಾರ್ (ನಿವೃತ್ತ ಸರ್ಕಾರಿ ನೌಕರರು) ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಜಿಲ್ಲೆಯ 21 ಹಿರಿಯ ನಾಗರಿಕರನ್ನು ಈ ಶುಭ ಸಂದರ್ಭದಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಅಲ್ಲದೆ, ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪಾಲ್ಗೊಂಡು ವಿಜೇತರಾದ 35 ಹಿರಿಯ ನಾಗರಿಕರಿಗೆ ಪ್ರಮಾಣ ಪತ್ರ ಹಾಗೂ ಬಹುಮಾನಗಳನ್ನು ವಿತರಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ನೋಡಲ್ ಅಧಿಕಾರಿ ಶಾಂತಾ ಜಡಿ ಅವರು ಎಲ್ಲರನ್ನೂ ಸ್ವಾಗತಿಸಿದರು. ನಿವೃತ್ತ ಸರ್ಕಾರಿ ನೌಕರರಾದ ಆಸೀಫ್ ಪಾಟೀಲ್ ಅವರು ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು. ಈ ಸಮಾರಂಭದಲ್ಲಿ ವಿಕಲಚೇ ತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಿಬ್ಬಂದಿ, ಗ್ರಾಮೀಣ/ನಗರ/ವಿವಿಧೊದ್ದೇಶ ಪುನರ್ವಸತಿ ಕಾರ್ಯಕರ್ತರು, ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ, ವಿಕಲಚೇತನರ ಸಹಾಯವಾಣಿ ಸಿಬ್ಬಂದಿ, ಹಿರಿಯ ನಾಗರಿಕರ ಸಹಾಯವಾಣಿ ಸಿಬ್ಬಂದಿ, ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಸಿಬ್ಬಂದಿ ವರ್ಗದವರು, ಜಿಲ್ಲೆಯ ಹಿರಿಯ ನಾಗರೀಕರು ಸೇರಿದಂತೆ ತಾಲೂಕಿನ ಸರ್ಕಾರಿ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಕರ್ನಾಟಕದ ಯುವಕರಿಗೆ ಅದಾನಿ ಸಮೂಹದ ನೆರವು



ಕಲಬುರಗಿ,ಅ.02-

ಎಸಿಸಿ, ವೈವಿಧ್ಯಮಯ ಅದಾನಿ ಸಮೂಹದ ಸಿಮೆಂಟ್ ಮತ್ತು ನಿರ್ಮಾಣ ಸಾಮಗ್ರಿಗಳ ಕಂಪನಿ, ಅದಾನಿ ಫೌಂಡೇಷನ್ ನೊಂದಿಗೆ ಸೇರಿ, ಎಸಿಸಿ ತೊಂಡೆಭಾವಿಯಲ್ಲಿನ ಅದಾನಿ ಸ್ಕಿಲ್ ಡೆವಲಪಮೆಂಟ್ ಸೆಂಟರ್ ಮೂಲಕ ಕರ್ನಾಟಕದ ಯುವಕರಿಗೆ ಜೀವನೋಪಾಯಕ್ಕಾಗಿ ಕ'ುಟುಂಬದಿಂದ' ದೂರವಾಗಬೇಕಾಗದಂತಹ ವೃತ್ತಿ ಅವಕಾಶಗಳನ್ನು ಕಂಡುಕೊಳ್ಳಲು ನೆರವಾಗುತ್ತಿದೆ.

ತೊಂಡೆಭಾವಿಯ ಚಿಕ್ಕದಲವಟ್ಟ ಗ್ರಾಮದ ಸಂತೋಷ್ ತಮ್ಮ ಭವಿಷ್ಯಕ್ಕಾಗಿ ಅಗತ್ಯವಿದ್ದ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಅವರು ಐಟಿಐ ಶಿಕ್ಷಣ ಪೂರ್ಣಗೊಳಿಸಿದ್ದರು. ಕೆಲಸದ ಅನುಭವ ಹೊಂದಿದ್ದರೂ ಮತ್ತು ಸ್ಥಿರ ಉದ್ಯೋಗ ಪಡೆಯಲು ಅಗತ್ಯ ಪ್ರಯತ್ನ ಹಾಗೂ ಬದ್ಧತೆ ತೋರಿಸಿದ್ದರು. ಆದಾಗ್ಯೂ, ಮನೆಯ ಸಮೀಪದಲ್ಲೇ ಸೂಕ್ತ ಉದ್ಯೋಗಾವಕಾಶ ದೊರಕುತ್ತಿರಲಿಲ್ಲ. ಲಭ್ಯವಿದ್ದ ಅವಕಾಶಗಳು ದೂರದಲ್ಲಿದ್ದವು ಅಥವಾ ಸ್ಥಿರವಾಗಿರಲಿಲ್ಲ. ಕುಟುಂಬದಿಂದ ದೂರ ಉಳಿಯುವುದು ಸಂತೋಷ ಅವರಿಗೆ ದೀರ್ಘಕಾಲದ ಆಯ್ಕೆಯಾಗಿರಲಿಲ್ಲ.

ಅವರು ಅದಾನಿ ಸ್ಕಿಲ್ ಡೆವಲಪಮೆಂಟ್ ಸೆಂಟರ್ ನ ಡೊಮೆಸ್ಟಿಕ್ ಡಾಟಾ ಎಂಟ್ರಿ ಆಪರೇಟರ್ ಕೋರ್ಸ್‌ಗೆ ಸೇರಿದಾಗ, ಅದು ಅವರಿಗಾಗಿ ಹೊಸ ಆರಂಭವಾಗಿರಲಿಲ್ಲ. ಬದಲಾಗಿ, ಐಟಿಐ ಮೂಲಕ ಪಡೆದ ತಾಂತ್ರಿಕ ಜ್ಞಾನಕ್ಕೆ ಪೂರಕವಾಗಿ ಡಿಜಿಟಲ್ ಸಾಮರ್ಥ್ಯ, ಸಂವಹನ ಕೌಶಲ್ಯ, ಕಾರ್ಯಸ್ಥಳದ ಸಿದ್ಧತೆ ಹಾಗೂ ವೃತ್ತಿಜೀವನ ಮಾರ್ಗದರ್ಶನದ ಕೊರತೆ ತುಂಬಿಕೊಳ್ಳುವ ಅವಕಾಶವಾಗಿತ್ತು. ಈ ಕೋರ್ಸ್ ಅವರಿಗೆ ಉದ್ಯೋಗ ಕ್ಷೇತ್ರಕ್ಕೆ ಅಗತ್ಯವಾದ ಸಮಗ್ರ ಸಿದ್ಧತೆಯನ್ನು ಒದಗಿಸಿತು.

ಇದಾದ ನಂತರ ದೊರೆತ ನೇಮಕಾತಿ ನೆರವು ಅಷ್ಟೇ ಪರಿಣಾಮಕಾರಿಯಾಗಿತ್ತು. ಸಂತೋಷ್ ಅವರನ್ನು ದೊಡ್ಡಬಳ್ಳಾಪುರದಲ್ಲಿರುವ ಮುಸ್ಸಾ ಹಿ ಆಟೋ ಪಾರ್ಟ್ಸ್ ಪ್ರೈ. ಲಿಮಿಟೆಡ್ ಸಂಸ್ಥೆಯೊಂದಿಗೆ ಸಂಪರ್ಕಿಸಲಾಯಿತು. ಇದು ಅವರ ಮನೆಗೆ ಸಮೀಪದಲ್ಲಿದ್ದು, ಅವರು ಹುಡುಕುತ್ತಿದ್ದ ಸ್ಥಿರ ಉದ್ಯೋಗಾವಕಾಶ ಒದಗಿಸಿತು. ಅವರು ಆಪರೇಟರ್ ಆಗಿ ಸೇರಿ ಇಂದು ತಿಂಗಳಿಗೆ 17,750 ರೂ. ಆದಾಯ ಗಳಿಸುತ್ತಿದ್ದಾರೆ.

ವೇತನವು ಮಹತ್ವದ್ದೇ ಸರಿ. ಆದರೆ ಸಂತೋಷ್ ಅವರಿಗೆ ಈ ಉದ್ಯೋಗ ಕೇವಲ ಆದಾಯದ ಮೂಲವಲ್ಲ. ಇದು ಸ್ಥಿರತೆ, ಕುಟುಂಬದ ಸಮೀಪದಲ್ಲಿರುವ ಅವಕಾಶ ಮತ್ತು ದೀರ್ಘಕಾಲದ ಅನಿಶ್ಚಿತತೆಗೆ ಅಂತ್ಯ ತಂದ ಸಾಧನೆಯಾಗಿದೆ. ಯಾರಿಗೇ ಆಗಲಿ ಅವರ ಸಾಮರ್ಥ್ಯ ಮತ್ತು ಪರಿಶ್ರಮಕ್ಕೆ ತಕ್ಕ ಅವಕಾಶ ದೊರೆತಾಗ ಜೀವನದಲ್ಲಿ ಹೇಗೆ ಬದಲಾವಣೆ ಸಾಧ್ಯವಾಗುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

ತೊಂಡೆಭಾವಿಯಲ್ಲಿನ ಅದಾನಿ ಫೌಂಡೇಷನ್ ಗೆ, ಸಂತೋಷ ಅವರ ಯಶೋಗಾಥೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಈಗಾಗಲೇ ಸಾಮರ್ಥ್ಯ ಮತ್ತು ಪ್ರೇರಣೆ ಹೊಂದಿರುವ ಯುವಕರನ್ನು ಸೂಕ್ತ ಅವಕಾಶಗಳೊಂದಿಗೆ ಸಂಪರ್ಕಿಸಿದಾಗ ಅತ್ಯಂತ ಪರಿಣಾಮಕಾರಿಯಾಗುತ್ತವೆ ಎಂಬುದನ್ನು ನೆನಪಿಸುತ್ತದೆ. ಸರಿಯಾದ ಸಮಯದಲ್ಲಿ ದೊರೆತ ತರಬೇತಿ, ಮಾರ್ಗದರ್ಶನ ಮತ್ತು ಉದ್ಯೋಗಾವಕಾಶಗಳು ವ್ಯಕ್ತಿಯ ಬದುಕನ್ನು ಹೇಗೆ ಪರಿವರ್ತಿಸಬಲ್ಲವು ಎಂಬುದನ್ನು ಅವರ ಪಯಣ ಸ್ಪಷ್ಟವಾಗಿ ತೋರಿಸುತ್ತದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಒಂದನೇಯ ಪುಟದಿಂದ

ರಾಜ್ಯದ ಮೊದಲ 'ಗಾಂಧಿ ಸ್ಮಾರಕ ಸ್ತಂಭ' ಅನಾವರಣ

ಮಹಾತ್ಮ ಗಾಂಧೀಜಿಯವರು ತಮ್ಮ ಪತ್ನಿ ಕಸ್ತೂರಬಾ ಅವರೊಂದಿಗೆ 1915ರ ಮೇ 8ರ ಶನಿವಾರದಂದು ಪ್ರಥಮ ಬಾರಿಗೆ ಬೆಂಗಳೂರಿಗೆ ಆಗಮಿಸಿದ್ದರು. ಅಂದು ಆಗಿನ ಸರ್ಕಾರಿ ಪ್ರೌಢಶಾಲೆಗೆ (ಇಂದಿನ ಸರ್ಕಾರಿ ಕಲಾ ಕಾಲೇಜು) ಭೇಟಿ ನೀಡಿ, ತಮ್ಮ ರಾಜಕೀಯ ಗುರುಗಳಾಗಿದ್ದ ಗೋಪಾಲಕೃಷ್ಣ ಗೋಖಲೆ ಅವರ ಭಾವಚಿತ್ರವನ್ನು ಅನಾವರಣಗೊಳಿಸಿದ್ದರು. ಅದರ ನೆನಪಿಗಾಗಿ ಈ ಸಭಾಂಗಣಕ್ಕೆ ಬಾಪೂಜಿ ಅವರ ಹೆಸರು ಇರಿಸಲಾಗಿದ್ದು, ಈಗ ಇದೇ ಆವರಣದಲ್ಲಿ ಮೊದಲ ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲಾಗಿದೆ.

ಕೈಬಿಟ್ಟ ಮತದಾರರ ಸೇರ್ಪಡೆ ಅಭಿಯಾನ : ಆಯೋಗ ಸೂಚನೆ

ಸಾಮಾನ್ಯ ಫಾರಂ-6 ಮೂಲಕ ಸೇರ್ಪಡೆ: ಎಸ್‌ಐಆರ್ ಪೂರ್ಣಗೊಂಡಿರುವ 20 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೆಸರು ಕೈತಪ್ಪಿರುವ ಅರ್ಹ ಮತದಾರರು ಹಾಗೂ ಮೊದಲ ಬಾರಿಗೆ ಮತದಾರರಾಗುವವರು ಸಾಮಾನ್ಯ ಶಾಸನಬದ್ಧ ಫಾರಂ-6 ಮೂಲಕ ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಬಹುದು. ಎಸ್‌ಐಆರ್ ಅವಧಿಯಲ್ಲಿ ಫಾರಂ-6ಗೆ ಸೇರಿಸಲಾಗಿದ್ದ ಹೆಚ್ಚುವರಿ ಘೋಷಣಾ ನಮೂನೆ ಈ ವಿಶೇಷ ಅಭಿಯಾನದಲ್ಲಿ ಅಗತ್ಯವಿಲ್ಲ ಎಂದು ಆಯೋಗ ಸ್ಪಷ್ಟಪಡಿಸಿದೆ.

ಅರ್ಹ ಮತದಾರರು ತಮ್ಮ ಕ್ಷೇತ್ರದ ಚುನಾವಣಾ ನೋಂದಣಿ ಅಧಿಕಾರಿಗೆ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಈ ಪ್ರಕ್ರಿಯೆಯನ್ನು ಸುಗಮಗೊಳಿಸಲು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಚುನಾವಣಾ ಅಧಿಕಾರಿಗಳು ವಿಶೇಷ ಕ್ರಮ ಕೈಗೊಳ್ಳಬೇಕಾಗಿದೆ.

13.37 ಕೋಟಿ ಹೆಸರುಗಳು ಕರಡು ಪಟ್ಟಿಯಿಂದ ಹೊರಗೆಎಸ್‌ಐಆರ್‌ನ ವಿವಿಧ ಹಂತಗಳಲ್ಲಿ 30 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಕರಡು ಮತದಾರರ ಪಟ್ಟಿಯಿಂದ 13.37 ಕೋಟಿಗೂ ಹೆಚ್ಚು ಹೆಸರುಗಳು ಹೊರಗುಳಿದಿವೆ. ಇದು ಎಸ್‌ಐಆರ್‌ಗೂ ಮುನ್ನಿದ್ದ ಒಟ್ಟು ಮತದಾರರ ಸಂಖ್ಯೆಯ ಸುಮಾರು 14.1ರಷ್ಟು ಎಂದು ವರದಿಯಾಗಿದೆ. ಆದರೆ ಕರಡು ಪಟ್ಟಿಯಿಂದ ಹೆಸರು ಹೊರಗುಳಿದಿರುವುದೇ ಅಂತಿಮವಾಗಿ ಮತದಾರರ ಹೆಸರನ್ನು ಅಳಿಸಲಾಗಿದೆ ಎಂದರ್ಥವಲ್ಲ; ಹಕ್ಕು ಮತ್ತು ಆಕ್ಷೇಪಣೆಗಳ ಪ್ರಕ್ರಿಯೆಯಲ್ಲಿ ಅರ್ಹರು ಮರುಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು.

ರಾಯಚೂರಿನಲ್ಲಿ ಮಹಾತ್ಮ ಗಾಂಧೀಜಿ ಅವರ 157ನೇ ಜಯಂತಿ ಆಚರಣೆ

ಪರಿಸರ ಹಾಗೂ ಮೂಕ ಜೀವಿಗಳಿಗೆ ಹಾನಿಯಾಗುತ್ತದೆ ಎಂದರು.

ಗಾಧೀಜಿಯವರ ಅಹಿಂಸೆಯ ಪರಿಕಲ್ಪನೆ ಅರ್ಥವಾಗಲು ಅವರ ಆತ್ಮಕಥನ 'ಮೈ ಎಕ್ಸ್ಪೆರಿಮೆಂಟ್ಸ್ ವಿತ್ ಟ್ರುತ್' (ಸತ್ಯದೊಂದಿಗೆ ನನ್ನ ಪ್ರಯೋಗಗಳು), ಸತ್ಯಾಗ್ರಹ ಮತ್ತು ಹಿಂದ್ ಸ್ವರಾಜ್ ಪುಸ್ತಕಗಳನ್ನು ಪ್ರತಿಯೊಬ್ಬರೂ ಓದಿ ಅರ್ಥೈಸಿಕೊಳ್ಳಬೇಕು. ಅವರಿಗೆ ಇಂದು ಕೇವಲ ಮಾಲಾರ್ಪಣೆ ಮಾಡುವುದಷ್ಟೇ ಅಲ್ಲದೆ, ಅವರ ತತ್ವ ಮತ್ತು ಮೌಲ್ಯಗಳನ್ನು ನಮ್ಮ ಜೀವನ ಹಾಗೂ ಕೆಲಸದಲ್ಲಿ ಅಳವಡಿಸಿಕೊಂಡು ನ್ಯಾಯಯುತವಾಗಿ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಸಮಾಜದ ಪ್ರಗತಿ ಸಾಧ್ಯ ಎಂದರು.

ಪುಸ್ತಕ ಬಿಡುಗಡೆ: ಮಹಾತ್ಮ ಗಾಂಧೀಜಿ ಅವರ 157ನೇ ಜಯಂತಿಯ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಹೊರತಂದ ಗಾಂಧಿ ದರ್ಶನ ಜನಪದ ಹಾಗೂ ಮಾರ್ಚ್ ಆಫ್ ಕರ್ನಾಟಕದ ವಿಶೇಷ ಸಂಚಿಕೆಗಳನ್ನು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಸೇರಿದಂತೆ ವಿವಿಧ ಗಣ್ಯರಿಂದ ಬಿಡುಗಡೆ ಮಾಡಲಾಯಿತು.

ಸರ್ವಧರ್ಮ ಪ್ರಾರ್ಥನೆ: ಕಾರ್ಯಕ್ರಮದಲ್ಲಿ ಹಿಂದೂ ಧರ್ಮ ಕುರಿತು ಪ್ರವಚನ ನೀಡಿದ ಲಕ್ಷ್ಮಿದೇವಿ, ಗೀತೆಯ ಸಾರಾಂಶವನ್ನು ತಿಳಿಸುತ್ತ, ಮಹಾತ್ಮ ಗಾಂಧಿ ಅವರು ಸತ್ಯ ಶೋಧನೆಯಲ್ಲಿ ನಿರತರಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ಸಮಸ್ಯೆಗಳ ಪರಿಹಾರಕ್ಕೆ ಗೀತೆ ಮೊರೆ ಹೋಗುತ್ತಾರೆ. ರಾಮನಾಮ ಜಪಿಸುತ್ತಿದ್ದರು. ಗಾಂಧಿ ಅವರು ಕೊನೆಯುಸಿರೆಳೆಯುವಾಗ ಹೇ ರಾಮ ಎಂದು ಉದ್ಗಾರ ಮಾಡಿರುವುದನ್ನು ಕೇಳಿ ತಿಳಿದಿದ್ದೇವೆ ಎಂದರು.

ಇಸ್ಲಾ ಧರ್ಮದ ಕುರಿತು ನೇಮತುಲ್ಲ ಪ್ರವಚನ ನೀಡಿ, ಕುರಾನ್ ಪಠಣ ಮಾಡಿ ಅದರ ಅರ್ಥವನ್ನು ತಿಳಿಸಿದರು. ವಿಶ್ವಕ್ಕೆ ಶಾಂತಿ ಸಾರಿದ ಗಾಂಧೀಜಿ ಅವರ ತತ್ವ, ಸಿದ್ಧಾಂತಗಳು ಎಲ್ಲರಿಗೂ ದಾರಿದೀಪವಾಗಿವೆ ಎಂದರು.

ಕ್ರಿಶ್ಚಿಯನ್ ಧರ್ಮದ ಕುರಿತು ಸುಮನ್ ಸುನ್ಯೆನ ಉಪನ್ಯಾಸ ನೀಡಿ, ಬೈಬಲ್‌ನಲ್ಲಿ ಹೇಳಿರುವ ಸಾರಾಂಶಗಳನ್ನು ತಿಳಿಸಿದರು. ಅಹಿಂಸೆಯಿದ ಒಳ್ಳೆಯದನ್ನು ಸಾಧಿಸಬಹುದು ಎಂಬುದನ್ನು ಮಹಾತ್ಮ ಗಾಂಧಿ ಅವರು ಹೇಳಿದಂತೆ ನಡೆಯುವ ಮೂಲಕ ತೋರಿಸಿಕೊಟ್ಟಿದ್ದಾರೆ. ಶಾಂತಿಯಿದ ಸಮಾಜ ಕಟ್ಟಲು ಸಾಧ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ತಿಳಿಸಿದರು.

ಬೌದ್ದ ಧರ್ಮದ ಕುರಿತು ಉಪನ್ಯಾಸ ನೀಡಿದ ವಿದ್ಯಾಸಾಗರ್, ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು. ಗುರು, ಹಿರಿಯರನ್ನು ಗೌರವಿಸಬೇಕು. ತಂದೆ-ತಾಯಿ ಸೇವೆ ಮಾಡುವುದನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೈನ್ ಧರ್ಮದ ಕುರಿತು ಉಪನ್ಯಾಸ ನೀಡಿದ ನಾಗಶ್ರೀ, ಪ್ರಾಚೀನ ಗ್ರಂಥದ ಬಗ್ಗೆ ವಿವರಿಸಿದರು. ಅಹಿಂಸೆ ಮಾರ್ಗದಲ್ಲಿ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿ ಅವರ ಮಾರ್ಗವನ್ನು ಎಲ್ಲರು ಅನುಸರಿಸಬೇಕು. ಮಕ್ಕಳಲ್ಲಿ ದೇಶಾಭಿಮಾನ ಬೆಳೆಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರಾಯಚೂರು ಮಹಾನಗರ ಪಾಲಿಕೆ ಆಡಳಿತ ವಿಭಾಗದ ಉಪ ಆಯುಕ್ತರಾದ ಶರಣಪ್ಪ, ಮುರಳಿಧರ್ ರಾವ್, ಕಂದಾಯ ವಿಭಾಗದ ಉಪ ಆಯುಕ್ತೆ ಸಂತೋಷ ರಾಣಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಡಾ.ಜಿ.ಸುರೇಶ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಶಾವಂತಗೇರಾ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ, ರಾಯಚೂರು ಮಹಾನಗರ ಪಾಲಿಕೆಯ ಸಮುದಾಯ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ, ಹಿರಿಯ ಪತ್ರಕರ್ತರರಾದ ಪಿ.ಚನ್ನಬಸವ, ಖಾನ್ ಸಾಬ್ ಮೋಮಿನ್, ವಾರ್ತಾ ಇಲಾಖೆಯ ಸಿಬ್ಬಂದಿಗಳಾದ ನರೇಶ, ರಮೇಶ ಗೌಡೂರು, ಅಬ್ಬಾಸ್ ಖಾನ್, ವೆಂಕಟೇಶ, ಅಂಬೇಡ್ಕರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು, ಸೇವದಳ, ಎನ್‌ಸಿಸಿ, ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳು ಇದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹ ಕಾರ್ಯದರ್ಶಿ ಡಾ. ದಂಡಪ್ಪ ಬಿರಾದಾರ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಸ್ವಚ್ಛತೆ ಜೀವನದ ಅವಿಭಾಜ್ಯ ಅಂಗ -ಜಿ ಮಲ್ಲಿಕಾರ್ಜುನ

ನೀಡಿದರು. ನಮ್ಮ ಶಾಲೆ ಸುಂದರ ವನವಾಗಬೇಕಾದರೆ ಪ್ರತಿಯೊಬ್ಬರು ಪರಿಶ್ರಮ ಪಡಲೇಬೇಕಾಗುತ್ತದೆ. ಒಂದು ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ ಆದ್ದರಿಂದ ಸಮುದಾಯದ ಸಹಭಾಗಿತ್ವವು ಪ್ರಮುಖ ಸ್ಥಾನ ವಹಿಸುತ್ತದೆ. ಮಕ್ಕಳಿಗೆ ಶ್ರಮದಾನದ ಅರಿವು ಮೂಡಿದಾಗ ತಮ್ಮ ಶಾಲೆಯನ್ನು ದೇಗುಲದಂತೆ ಕಾಣಲು ಆರಂಭಿಸುತ್ತಾರೆ .

ಕಾಯಕವೇ ಕೈಲಾಸ ಎನ್ನುವ ಬಸವಣ್ಣನ ತತ್ವವನ್ನು ಪ್ರತಿಯೊಬ್ಬರು ಪಾಲಿಸಬೇಕು ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಹುಟ್ಟು ದಿನದಂದು ಅವರ ಆದರ್ಶಗಳನ್ನು ಪಾಲಿಸುವಂತಹ ಕೈ ಕಾರ್ಯದಲ್ಲಿ ನಾವು ತೊಡಗಿದಾಗ ಮಾತ್ರ ನಮ್ಮ ಶಾಲೆಯ ಮಕ್ಕಳು ನಮ್ಮನ್ನು ಅನುಕರುಣೆ ಮಾಡುತ್ತಾರೆ.

ಇಂದು ನಾವು ಸಾಂಕೇತಿಕವಾಗಿ ಸಸಿಗಳನ್ನು ನೆಟ್ಟರೆ ಸಾಲದು ಅವುಗಳ ಪೋಷಣೆ ಮಾಡುವ ಜವಾಬ್ದಾರಿ ಮಕ್ಕಳಿಗೆ ನೀಡಬೇಕು , ಆಗ ಮಾತ್ರ ಶ್ರಮದಾನದ ಅರಿವು ಮಕ್ಕಳಿಗೆ ಉಂಟಾಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಡಾ: ಈರಣ್ಣ ಕೋಸಗಿ, ಸದರಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾದ ನಾಗೇಂದ್ರಪ್ಪ ಮುಖ್ಯ ಶಿಕ್ಷಕರಾದ ಶಶಿಕಲಾ, ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಾದ ರಾಜಶೇಖರ್ ಪಾಟೀಲ್, ಶಿಕ್ಷಣ ಸಂಯೋಜಕರಾದ ರಾಮಕೃಷ್ಣ ಕಟ್ಟಾವಲಿ,ಮಂಜುನಾಥ ,ರಾಘವೇಂದ್ರ ಶಿಕ್ಷಕರಾದ ವೆಂಕೇಶ ಜಾಲಿಬೆಂಚಿ, ಉರುಕುಂದ ನರಸಿಂಹರಾಜ, ನೀರಾಜ್ , ದೇವರಾಜ್, ಸುನಂದಾ,ಸಿಆರ್ಪಿ ಸುರೇಶ್ ಉಪಸ್ಥಿತರಿದ್ದರು.

ದಿ.4ರಂದು ಶ್ರೀಮತಿ ಲಕ್ಷ್ಮಿದೇವಿ ಶಾಸ್ತ್ರಿಯವರ ಸಪ್ತ ಕೃತಿಗಳ ಬಿಡುಗಡೆ

ವಿಶ್ವವಿದ್ಯಾಲಯ, ಗದಗ ಮಾಡಲಿದ್ದಾರೆ.ಕೃತಿ ಪರಿಚಯ ರಾಯಚೂರು ಕೋಟೆಗೆ ನರಬಲಿ ಬಾಳೆ ಸಂಗಮ್ಮ ಮತ್ತು ಬಸರೆಡ್ಡಿ ಮಲ್ಲವ್ವ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಾಜಿದ್ ಸಾಜಿದ್ ಹಿರಿಯ ಚಿತ್ರ ಕಲಾವಿದರು ಮಾನವಿ ಭಾಗವಹಿಸಲಿದ್ದಾರೆ. ಕೃತಿ ಪರಿಚಯವನ್ನು ರಾಯಚೂರಿನ ಚಿತ್ರಕಲಾ ದಿಗ್ಗಜರು, ಎಚ್. ಎಚ್. ಮ್ಯಾದಾರ್ ರಾಯಚೂರು ಚಿತ್ರಕಲಾ ದಿಗ್ಗಜರು ಮಾಲಿದ್ದಾರೆ.

ಕೃತಿ ಪರಿಚಯ ಡಾ ಚನ್ನಬಸವಯ್ಯ ಹಿರೇಮಠ ಸಂಶೋಧನಾ ವಿದ್ವಾಂಸರು ವಚನವಲ್ಲರಿ ಚುಟುಕುಗಳು ಹಾಗೂ ಲಕ್ಷ್ಮೀದೇವಿ ಶಾಸ್ತ್ರಿ ಅವರ ಕಂಠದಲ್ಲುಳಿದ ಜನಪದಗಳು ಡಾ. ಸುಗುಣ ಬಸವರಾಜ್ ಮಾಡಲಿದ್ದಾರೆ.

ಕೃತಿ ಪರಿಚಯ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ರಾ. ಸಂಶೋಧನಾ ಕೃಷಿಕ ದುರ್ಗಾ ಜಗದೀಶ್, ಕರ್ನಾಟಕ ಏಕೀಕರಣ ಹೋರಾಟಗಾರರ ವ್ಯಕ್ತಿ ಚಿತ್ರಮಾಲೆ - ಪಂಡಿತ ತಾರಾನಾಥ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ರಂಗಣ್ಣ ಪಾಟೀಲ ಅಳ್ಳುಂಡಿ ಜಿಲ್ಲಾಧ್ಯಕ್ಷರು ಕ.ಸಾ.ಪ.ರಾಯಚೂರು ವಹಿಸಲಿದ್ದಾರೆ. ಗೌರವ ಉಪಸ್ಥಿತಿ : ಡಾ. ಬಿ. ವಿಜಯ ರಾಜೇಂದ್ರ ಅಧ್ಯಕ್ಷರು ತಾಲೂಕು ಕ.ಸಾ.ಪ ಸಂಘಟನಾ ಕಾರ್ಯದರ್ಶಿಗಳು ರಾವುತರಾವ್ ಬರೂರು,ಡಾ. ಶರಣಪ್ಪ ಚಲುವಾದಿ ಡಾ. ರೇಖಾ ಪಾಟೀಲ್ ಹಾಗೂ ಸರ್ವ ಪದಾಧಿಕಾರಿಗಳು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು,ಗೌರವ ಕಾರ್ಯದರ್ಶಿಗಳು ತಾಲೂಕು ಕ.ಸಾ.ಪ. ರಾಯಚೂರು ಶ್ರೀಮತಿ ಲಕ್ಷ್ಮಿದೇವಿ ಶಾಸ್ತ್ರಿ, ಹಿರಿಯ ಸಾಹಿತಿಗಳು ರಾಯಚೂರು.ಕಾರ್ಯಕ್ರಮ ನಿರ್ವಹಣೆಯನ್ನು ಡಾ. ಗವಿಸಿದ್ದಪ್ಪ ಎಚ್. ಪಾಟೀಲ್ ಹಿರಿಯ ಸಾಹಿತಿಗಳು- ವಿಮರ್ಶಕರು ಕಲಬುರಗಿ ಮಾಡಲಿದ್ದಾರೆಂದರು. ಈ ಸಂದರ್ಭದಲ್ಲಿ ಜಿ.ತಾಯಪ್ಪ,ದಂಡಪ್ಪ ಬಿರಾದ,ಲಕ್ಷ್ಮಿದೇವಿ ಶಾಸ್ತ್ರಿ,ಪ್ರತಿಭಾ ಗೋನಾಳ,ವೈಶಾಲಿ ಪಾಟೀಲ್ ಉಪಸ್ಥಿತರಿದ್ದರು.

ಬಳ್ಳಾರಿಯಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಹಿರಿಯ ನಾಗರಿಕರ ಸಂರಕ್ಷಣೆ ಆಸ್ತಿಗಾಗಿ ಪೋಷಕರನ್ನು ಕಡೆಗಣಿಸದಂತೆ ನ್ಯಾಯಾಧೀಶ ರಾಜೇಶ್ ಹೊಸಮನೆ ಕರೆ



ಬಳ್ಳಾರಿ,ಅ.01- ಮಕ್ಕಳು ಕೇವಲ ಆಸ್ತಿಗಾಗಿ ಹಿರಿ ಯರನ್ನು ಬಳಸಿಕೊಳ್ಳದೆ, ವೃದ್ಧಾಪ್ಯ ದಲ್ಲಿ ಅವರಿಗೆ ಪ್ರೀತಿ, ಗೌರವ ನೀಡಿ ಸಂರಕ್ಷಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಹಿರಿಯ ನಾಗರಿಕರಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 'ದೀರ್ಘಾಯುಷ್ಯದ ಯುಗ: ಸುದೀರ್ಘ ಜೀವನಕ್ಕಾಗಿ ಜೀವನ ಕ್ರಮಗಳ ಮರುಚಿಂತನೆ' ಎಂಬ ಘೋಷವಾಕ್ಯದೊಂದಿಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಗುರುವಾರ ಆಯೋಜಿಸಿದ್ದ 'ವಿಶ್ವ ಹಿರಿಯ ನಾಗರಿಕರ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಮಕ್ಕಳು ತಂದೆ-ತಾಯಿಯ ಬಳಿ ಆಸ್ತಿ ಅಥವಾ ಪಿಂಚಣಿ ಇದ್ದರೆ ಮಾತ್ರ ಅವರನ್ನು ಗೌರವಿಸುವ ಮತ್ತು ನೋಡಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ. ಹೆಣ್ಣುಮಕ್ಕಳು ಅಥವಾ ಗಂಡುಮಕ್ಕಳು ಪೋಷಕರಿಗೆ ಆಶ್ರಯ ನೀಡಲು ಆಸ್ತಿಯನ್ನೇ ಮಾನದಂಡವನ್ನಾಗಿ ಮಾಡಿಕೊಳ್ಳುತ್ತಿ ರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಹಿರಿಯರು ಬದುಕಿರುವವರೆಗೂ ತಮ್ಮ ಆಸ್ತಿಯನ್ನು ಉಡುಗೊರೆ ಅಥವಾ ವಿಲ್ ಮೂಲಕ ಮಕ್ಕಳಿಗೆ ಬಿಟ್ಟುಕೊಡಲು ಆತುರಪಡಬಾರದು. ಪೋಷಕರ ಜೀವಿತಾವಧಿಯ ನಂತರ ಕಾನೂನುಬದ್ಧವಾಗಿಯೇ ಆಸ್ತಿ ವಾರಸುದಾರರಿಗೆ ಸೇರುವುದರಿಂದ, ಯಾವುದೇ ಕಾರಣಕ್ಕೂ ಒತ್ತಡಕ್ಕೆ ಒಳಗಾಗಿ ಬರೆದುಕೊಡಬೇಡಿ ಎಂದು ಅವರು ತಿಳಿಸಿದರು.

ಕೇವಲ ಆರ್ಥಿಕ ಸಹಾಯ ಅಥವಾ ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು ಮಾತ್ರವಲ್ಲದೆ, ಹಿರಿಯರೊಂದಿಗೆ ಕಾಲ ಕಳೆಯು ವುದು, ಅವರ ಮಾತುಗಳನ್ನು ಆಲಿಸುವುದು ಮತ್ತು ಅವರ ಭಾವನೆಗಳನ್ನು ಗೌರವಿಸುವುದು ಇಂದಿನ ಯುವ ಪೀಳಿಗೆಯ ಕರ್ತವ್ಯ ವಾಗಿದೆ. ಇಂದಿನ ಯುವಜನತೆ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಮುಳುಗಿದ್ದು, ಹಿರಿಯರ ಅನುಭವದ ಮಾತುಗಳನ್ನು ಆಲಿಸಲು ಸಮಯ ನೀಡುತ್ತಿಲ್ಲ ಎಂದು ಅಭಿಪ್ರಾಯ ಪಟ್ಟರು.

ಹಿರಿಯ ನಾಗರಿಕರ ಹಿತರಕ್ಷಣೆ ಮತ್ತು ನಿರ್ವಹಣಾ ಕಾಯ್ದೆಯಡಿ ಹಿರಿಯರ ಆಸ್ತಿ ರಕ್ಷಣೆಗೆ ಕಾನೂನು ನೆರವು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತ ನೆರವು ಲಭ್ಯವಿದೆ. ಹಾಗಾಗಿ ಹಿರಿಯ ನಾಗರಿಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ಉತ್ಸಾಹದಿಂದ ಇರಬೇಕು ಮತ್ತು ಅವರ ಜೀವನಾನುಭವವನ್ನು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಿ ನೀಡಬೇಕು ಎಂದು ಕರೆ ನೀಡಿದರು.

ಜಿ. ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್ ಅವರು ಮಾತನಾಡಿ, ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕೇವಲ ಒಂದು ದಿನದ ಆಚರಣೆಗೆ ಸೀಮಿತ ವಾಗಬಾರದು. ಸಮಾಜ ಹಾಗೂ ಕುಟುಂಬದ ಆಧಾರಸ್ತಂಭವಾಗಿರುವ ಹಿರಿಯ ನಾಗರಿಕರನ್ನು ಗೌರವದಿಂದ ಕಾಣುವುದು ಮತ್ತು ಪೋಷಿಸುವುದು ಪ್ರತಿ ಯೊಬ್ಬರ ಹೊಣೆ ಎಂದು ಕರೆ ನೀಡಿ ದರು. ಬೇರಿಲ್ಲದೆ ಮರ ಬದುಕಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ತಂದೆ-ತಾಯಿ ಹಾಗೂ ಹಿರಿಯರ ಆಶೀರ್ವಾದವಿಲ್ಲದೆ ಯಶಸ್ಸು ಅಪೂರ್ಣ. ಹಿರಿಯರ ಅನುಭವ ಯುವಪೀಳಿಗೆಗೆ ದೊಡ್ಡ ಮಾರ್ಗ ದರ್ಶಿಯಾಗಿದೆ. ಕೇವಲ ಪಿಂಚಣಿ ಅಥವಾ ಚಿಕಿತ್ಸೆ ನೀಡುವುದು ಮಾತ್ರವಲ್ಲದೆ, ಅವರಿಗೆ ಪ್ರೀತಿ ಮತ್ತು ಗೌರವ ನೀಡುವುದು ಅತ್ಯಂತ ಮುಖ್ಯ ಎಂದು ಅಭಿಪ್ರಾಯ ಪಟ್ಟರು. 2007ರ ಹಿರಿಯ ನಾಗರಿಕರ ಪಾಲನೆ ಮತ್ತು ಪೋಷಣೆ ಕಾಯ್ದೆಯನ್ವಯ ಮಕ್ಕಳು ಅಥವಾ ಸಂಬಂಧಿ ಕರು ಹಿರಿಯರನ್ನು ಕಡ್ಡಾಯವಾಗಿ ಪಾಲನೆ-ಪೋಷಣೆ ಮಾಡಬೇಕು; ತಪ್ಪಿದಲ್ಲಿ ಶಿಕ್ಷೆಗೆ ಗುರಿಯಾಗಬೇಕಾ ಗುತ್ತದೆ. ಮಕ್ಕಳಿಗೆ ಆಸ್ತಿ ವರ್ಗಾವಣೆ ಮಾಡುವಾಗ 'ನನ್ನನ್ನು ಸರಿಯಾಗಿ ನೋಡಿ ಕೊಳ್ಳಬೇಕು' ಎಂಬ ಷರತ್ತನ್ನು ನಮೂದಿಸಬೇಕು. ಒಂದು ವೇಳೆ ಮಕ್ಕಳು ಪೋಷಿಸದಿದ್ದರೆ, ಸಹಾಯಕ ಆಯುಕ್ತರು ಆ ವರ್ಗಾವಣೆ ಪತ್ರವನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತಾರೆ. ಹಿರಿಯರ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಮಾಸಿಕ ನಿರ್ವಹಣಾ ವೆಚ್ಚವನ್ನು ಕಡ್ಡಾಯವಾಗಿ ನೀಡ ಬೇಕೆಂಬ ನಿಯಮವೂ ಇದೆ ಎಂದು ತಿಳಿಸಿದರು.

ಗ್ರಂಥಾಲಯದಲ್ಲಿ ವಿಶೇಷ ಮೀಸಲಾತಿ: ಹಿರಿಯ ನಾಗರಿಕರ ವಿಶ್ರಾಂತಿ, ವಾಚನ ಮತ್ತು ಚರ್ಚೆಗಳಿ ಗೆ ಅನುಕೂಲವಾಗುವಂತೆ ಬಳ್ಳಾರಿಯಲ್ಲಿ ನಿರ್ಮಾಣವಾಗಲಿರುವ ನೂತನ ಗ್ರಂಥಾಲಯದ ನೆಲಮಹಡಿ ಯನ್ನು ಸಂಪೂರ್ಣವಾಗಿ ಹಿರಿಯ ನಾಗರಿಕರಿಗೆ ಮೀಸಲಿಡಲು ಜಿಲ್ಲಾಡ ಳಿತ ತೀರ್ಮಾನಿಸಿದೆ ಎಂದು ತಿಳಿಸಿದ ಅವರು, ಹಿರಿಯ ನಾಗರಿ ಕರಿಗೆ ಯಾವುದೇ ಸಮಸ್ಯೆ ಎದುರಾದರೂ ನೇರವಾಗಿ ಜಿಲ್ಲಾಡಳಿತ ಅಥವಾ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ರುವ ಶತಾಯುಷಿಗಳಿಗೆ ಸನ್ಮಾನಿಸ ಲಾಯಿತು ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತ ರಾದ ಹಿರಿಯ ನಾಗರಿಕರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಡಿವೈಎಸ್ಪಿ ಗೋವಿಂದರಾಜುಲು, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ/ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಉಮಾಪತಿ ಗೌಡ್ರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯಕ್, ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಲ್ಯಾಣಾಧಿಕಾರಿ ಗೋವಿಂದಪ್ಪ ಹೆಚ್.ಎಂ., ಕೃಷ್ಣಾ ಸನ್ನಿಧಿಯ ವೈದ್ಯರು ಹಾಗೂ ಮುಖ್ಯಸ್ಥರಾದ ನಾಗರತ್ನ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಮಲ್ಲೇಶ್, ಹಿರಿಯ ಸಾಹಿತಿಗಳಾದ ಎನ್.ಡಿ. ವೆಂಕಮ್ಮ, ಅನುಗ್ರಹ ಸಂಸ್ಥೆಯ ಪ್ರೇಮಾ ಸೇರಿ ದಂತೆ ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ವಿ ಬಿ ಜಿ ರಾಮ್ ಜಿ ಕಾರ್ಮಿಕರಿಗೆ ಬಾಕಿ ಇರುವ ಕೂಲಿ ಹಣ ನೀಡಲು ಹಾಗು ಸಾರ್ವಜನಿಕರಿಗೆ ಕುಡಿಯುವ ನೀರು ಸರಿಯಾಗಿ ಪೂರೈಸಲು ಪ್ರತಿಭಟನೆ

ಕೊಟ್ಟೂರು: ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಮಾಹಿತಿ ವೇದಿಕೆಯ ವತಿಯಿಂದ ವಿಬಿ ಜಿ ರಾಮ್ ಜಿ ಯೋಜನೆ ಅಡಿಯಲ್ಲಿ ಕೆಲಸ ಮಾಡಿದ ಕೂಲಿ ಕಾರ್ಮಿಕರಿಗೆ 15 ದಿವಸಗಳ ಒಳಗೆ ಕೂಲಿ ಹಣ ಜಮಾ ಮಾಡುವ ಕಾಯಿದೆ ಇದ್ದರು, ಕಾಯ್ದೆಯನ್ನು ಉಲ್ಲಂಘನೆ ಮಾಡಿ ಕಾರ್ಮಿಕರ ಖಾತೆಗೆ ಸುಮಾರು ಮೂರು ತಿಂಗಳಾದರೂ ಕಾರ್ಮಿಕರ ಹಣ ಜಮವಾಗದೇ ಇರುವುದನ್ನು ಮತ್ತು ಕೊಟ್ಟೂರು ಪಟ್ಟಣದಲ್ಲಿ ಪಟ್ಟಣ ಪಂಚಾಯಿತಿ ಯವರು ಸಾರ್ವಜನಿಕರಿಗೆ 15 ದಿವಸಕೊಮ್ಮೆ ಕುಡಿಯುವ ನೀರು ಬಿಡುವುದನ್ನು ವಿರೋಧಿಸಿ ತಾಲೂಕು ಪಂಚಾಯಿತಿ.ಪಟ್ಟಣ ಪಂಚಾಯಿತಿ.ತಹಶಿಲ್ದಾರರ ಕಚೇರಿ ಅಧಿಕಾರಿಗಳ ವಿರುದ್ಧ ಘೋಷಣೆಯನ್ನು ಕೂಗುವ ಮೂಲಕ ಪ್ರತಿಭಟನೆಯನ್ನು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಿಂದ ತಹಸಿಲ್ದಾರ್ ಕಚೇರಿಯವರೆಗೆ, ಕಾಲ್ನಡಿಗೆ ಮೂಲಕ ಪ್ರತಿಭಟನೆ ನೆಡೆಸಿ ತಹಶಿಲ್ದಾರ ಕಚೇರಿ ಮುಂಬಾಗದಲ್ಲಿ ಗ್ರೇಡ್ 2 ತಹಶಿಲ್ದಾರರಾದ ಎಂ.ಪ್ರತಿಭಾ ರವರಿಗೆ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ರವಿಕುಮಾರ್ ರವರಿಗೆ ಹಾಗೂ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ವೇದಿಕೆಯ ಪಧಾದಿಕಾರಿಗಳು ಕೂಲಿ ಕಾರ್ಮಿಕರು ತಮ್ಮ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿ ಅಗ್ರಹಿಸಿದರು



ಈ ಸಂದರ್ಭದಲ್ಲಿ ಸಿಪಿಐ ಭಾರತ ಕಮ್ಯುನಿಸ್ಟ್ ಪಕ್ಷದ ಕೊಟ್ಟೂರು ತಾಲೂಕಿನ ಪ್ರಧಾನ ಕಾರ್ಯದರ್ಶಿಯಾದ ರೇಣುಕಮ್ಮ ಮಾತನಾಡಿ ಗ್ರಾಮ ಪಂಚಾಯತಿಯಲ್ಲಿ ವಿಬಿ ಜಿ ರಾಮ್ ಜಿ ಯೋಜನೆಯಡಿ ಕೆಲಸ ಮಾಡಿದ ಕೂಲಿ ಕಾರ್ಮಿಕರಿಗೆ ಸುಮಾರು ಮೂರು ತಿಂಗಳಾದರೂ ಕೂಲಿಯನ್ನು ನೀಡದೆ ವಿಳಂಬ ಮಾಡಿದರೆ, ಕೆಲಸ ಮಾಡಿದ ಕಾರ್ಮಿಕರು ಅವರ ಕುಟುಂಬ ನಿರ್ವಹಣೆಯನ್ನು ಹೇಗೆ ಮಾಡಬೇಕು? ದಿನನಿತ್ಯದ ಖರ್ಚಿಗೆ ಯಾರನ್ನು ಕೇಳಬೇಕು? ಅವರ ಕಷ್ಟವನ್ನು ಅರ್ಥ ಮಾಡಿಕೊಂಡು, ಅವರ ಕೆಲಸದ ಕೂಲಿಯನ್ನು ಆದಷ್ಟು ಬೇಗನೆ ಅವರು ಖಾತೆಗೆ ಜಮಾ ಮಾಡಬೇಕು. ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಸ್ಥರು ಏನು ಕೇಳಿದರು ಅನುದಾನ ಬಂದಿಲ್ಲ ಎಂಬ ಉತ್ತರವನ್ನು ನೀಡುತ್ತಿರುತ್ತಾರೆ ಹಾಗಾದರೆ ಯಾವ ಯಾವ ಅನುದಾನ ಬಂದಿಲ್ಲ ಎಂದು ಪಂಚಾಯಿತಿಗಳ ಮುಂದೆ ಒಂದು ಬೋರ್ಡುನ್ನು ಹಾಕಿ ಎಂದು ಅಕ್ರೋಶ ವ್ಯಕ್ತಪಡಿಸಿದರು.

ಗೃಹ ಲಕ್ಷ್ಮಿ ಹಣವನ್ನು ಅವರ ಖಾತೆಗೆ ಜಮಾ ಮಾಡಲು, ಅವರ ಗಂಡನ ಆಧಾರ್ ಕಾರ್ಡ್ ಪ್ರತಿಯನ್ನು ಕೊಡಬೇಕು, ಇಲ್ಲವಾದರೆ ಅವರ ಖಾತೆಗೆ ಹಣ ಜಮಾ ಆಗುವುದಿಲ್ಲವಂತೆ, ಅವರ ಹೆಸರಿನಲ್ಲಿ ಇರುವ ಮೊಬೈಲ್ ನಂಬರನ್ನು ನೀಡಬೇಕು, ಮೊಬೈಲ್ ನಂಬರ್ ಮತ್ತು ಮೊಬೈಲ್ ಇಲ್ಲದವರು ಏನು ಮಾಡಬೇಕು? 85 ಮತ್ತು 86 ವಷ9 ವಯಸ್ಸಾದ ಮಹಿಳೆಯರು ಆಧಾರ್ ಕಾರ್ಡ್ 'ತಮ್'ನ್ನು ಕೊಡಲು ಹೋದರೆ ಬೆರಳಲ್ಲಿನ ಗೆರೆ ಸವಕಳಿಯಿಂದ 'ತವ್' ತೆಗೆದುಕೊಳ್ಳದಿದ್ದರೆ ಏನು ಮಾಡಬೇಕು? ಎಂದು ರೇಣುಕಮ್ಮ ಅಧಿಕಾರಿಗಳ ವಿರುದ್ಧ ಚಾಟಿ ಬೀಸಿದರು.

ಮಾಹಿತಿ ಹಕ್ಕು ವೇದಿಕೆಯ ಜಿಲ್ಲಾ ಅಧ್ಯಕ್ಷರಾದ ರಾಜನಗೌಡ ಮಾತನಾಡಿ ಕಂದಗಲ್ ಗ್ರಾಮ ಪಂಚಾಯಿತಿಯಲ್ಲಿ ಏನೇ ಕೆಲಸ ಕೇಳಿದರೂ ಅನುದಾನ ಬಂದಿಲ್ಲ ಎಂದು ಹೇಳುತ್ತಾರೆ. ಯಾವುದೇ ಮೂಲಭೂತ ಸೌಕರ್ಯಕ್ಕೆ ಸಂಬಂಧಪಟ್ಟ ಕಾಮಗಾರಿಗೆ ಕೆಲಸವನ್ನು ಕೈಗೆತ್ತಿಕೊಳ್ಳದೇ ಅನುದಾನ ಬಂದಿಲ್ಲ ಎಂಬ ನೇರ ಉತ್ತರವನ್ನು ಪಿಡಿಓ ರವರು ನೀಡುತ್ತಾರೆ. ಇವರಿಗೆ ನಮ್ಮಂತ ಬಡವರ ಕಷ್ಟ ಅರ್ಥವಾಗುವುದಿಲ್ಲ ಅಥವಾ ಅರ್ಥವಾಗದೆ ಇರುವವರ ತರ ನಟನೆ ಮಾಡುವರು ತಿಳಿಯುತ್ತಿಲ್ಲ. ವಿಬಿ ಜಿ ರಾಮ್ ಜಿ ಮೂರು ವಾರಗಳ 'ವರೆಗೆ ಕೆಲಸ ಮಾಡಿದ ಕೂಲಿಯನ್ನು ಅವರ ಖಾತೆಗೆ ಆಗದೆ 2 ತಿಂಗಳವರೆಗೆ ವಿಳಂಬ ಮಾಡಿರುವುದಕ್ಕೆ ನಿರುದ್ಯೋಗ ಭತ್ಯೆಯನ್ನು ನೀಡಬೇಕು. ಗ್ರಾಮಕ್ಕೆ ಕಾರಣರಾದ ಬರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಆದಷ್ಟು ಬೇಗನೆ ಅವರ ಖಾತೆಗೆ ಹಣ ಜಮಾ ಮಾಡಬೇಕು, ಇಲ್ಲವಾದರೆ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಾಹಿತಿ ಹಕ್ಕು ವೇದಿಕೆ ಜಿಲ್ಲಾ ಸದಸ್ಯರಾದ ಆರ್ ಅಮರೇಶ ಮಾತನಾಡಿ ಕಂದಗಲ್ಲು ಗ್ರಾಮ ಪಂಚಾಯತಿಯ ಪಿಡಿಓ ರವರಿಗೆ ಈಗಾಗಲೇ ಕಾರ್ಮಿಕರ ಕೂಲಿಯನ್ನು ಅವರ ಖಾತೆಗೆ ಹಾಕದೆ ವಿಳಂಬ ಮಾಡಿರುವ ಕಾರಣ ಆದಷ್ಟು ಬೇಗನೆ ಒಂದು ವಾರದ ಒಳಗಾಗಿ ಬಾಕಿ ಇರುವ ಎಲ್ಲಾ ಕೂಲಿಯ ಹಣವನ್ನು ಅವರ ಖಾತೆಗೆ ತುಂಬಬೇಕು. ಇದಕ್ಕೆ ಸಂಬಂಧಪಟ್ಟಂತೆ ಪಿಡಿಓ ರವರಿಗೆ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ದೂರು ಸಲ್ಲಿಸಿದರು ಯಾವುದೇ ಪ್ರಯೋಜನವಾಗಿಲ್ಲ. ಇದು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ರಸ್ತೆ ತಡೆ ಮಾಡುವ ಮೂಲಕ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಅಗ್ರಹಿಸಿದರು

ಈ ಸಂದರ್ಭದಲ್ಲಿ ಸಿದ್ದೇಶ, ನಾಗರಾಜ, ಎಂ ಬಸವರಾಜ ಕರಿಬಸಪ್ಪ, ಹುಲುಗಪ್ಪ, ಹನುಮಂತಪ್ಪ, ಅಶೋಕ ಎಚ್ ಕರಿಯಪ್ಪ, ಸಿದ್ದಲಿಂಗಪ್ಪ, ಹನುಮಂತಪ್ಪ, ರುದ್ರಪ್ಪ, ಹುಲಗಪ್ಪ ಅಜ್ಜಯ್ಯ, ಗೌರಮ್ಮ, ಕವಿತಾ, ನೀಲಮ್ಮ, ಕಾಳಮ್ಮ ಉಪಸ್ಥಿತರಿದ್ದರು.

ಜ್ಞಾನೇಶ್ ಕುಮಾರ್ ವಜಾಕ್ಕೆ ಒತ್ತಾಯಿಸಿ ಪ್ರತಿಭಟನೆ

ಈ ವೇಳೆ ಜಾನ್ ವೆಸ್ಲಿ,ಶರಣು ಕುಮಾರ್, ಮಾರೆಪ್ಪ ಹರವಿ ಸೇರಿದಂತೆ ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ಪಧಾದಿಕಾರಿಗಳು ಇದ್ದರು.

ಸಮಸ್ಯೆ ಬಗೆಹರಿಸದಿದ್ದರೆ ಪಾಲಿಕೆ, ಜಿಲ್ಲಾಡಳಿತ ಕಚೇರಿ ಎದುರು ಹೋರಾಟದ ಎಚ್ಚರಿಕೆ

ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಬೇಕು" ಎಂದು ಆಗ್ರಹಿಸಿದರು.

ಸಂತ್ರಸ್ತರಿಗೆ ತಕ್ಷಣ ಕುಡಿಯುವ ನೀರು, ಚರಂಡಿ, ಸ್ವಚ್ಛತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು. ಸ್ಥಳೀಯರಿಗೆ ಆದ್ಯತೆ ನೀಡಿ ಶಾಶ್ವತ ಪುನರ್ವಸತಿ ವ್ಯವಸ್ಥೆ ಮಾಡಬೇಕು. ಕಾಮಗಾರಿ ವಿಳಂಬಕ್ಕೆ ಕಾರಣವೇನು ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಸಂತ್ರಸ್ತ ನಿವಾಸಿಗಳನ್ನು ಸಂಘಟಿಸಿ ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ರಾಮನಗೌಡ ಎಚ್ಚರಿಕೆ ನೀಡಿದರು.

ಬಡ ಹಾಗೂ ಅಸಹಾಯಕ ಕುಟುಂಬಗಳ ಸಮಸ್ಯೆಯನ್ನು ಮಾನವೀಯ ನೆಲೆಯಲ್ಲಿ ಪರಿಗಣಿಸಿ, ಮಹಾನಗರ ಪಾಲಿಕೆ ಆಯುಕ್ತರು, ಜಿಲ್ಲಾಧಿಕಾರಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಪುನರ್ವಸತಿ ಕಾಮಗಾರಿಗೆ ಕಾಲಮಿತಿ ನಿಗದಿಪಡಿಸಿ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ದುಂಡಸಿ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ



ಹುಬ್ಬಳ್ಳಿ,ಅ.02- ಕೆ.ಎಲ್.ಇ. ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಹುಬ್ಬಳ್ಳಿ ಇವರ ವತಿಯಿಂದ, ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಶಿಗ್ಗಾಂವ ತಾಲ್ಲೂಕಿನ ದುಂಡಿಸಿ ಗ್ರಾಮದ ಸರಕಾರಿ ಶಾಸಕರ ಮಾದರಿ ಶಾಲೆಯಲ್ಲಿ ದಿನಾಂಕ 7/10/2026 ಬುಧವಾರ ಸಮಯ 9.30 ರಿಂದ 1 ಘಂಟೆಯವರೆಗೆ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಯಿತು.

ಚಿಕಿತ್ಸೆ ಸೇವೆಗಳು : ಪಿಜಿಶಿಯನ, ಶಸ್ತ್ರ ಚಿಕಿತ್ಸೆ ತಜ್ಞರು, ಪ್ರಸ್ತುತಿ ಸ್ತ್ರೀರೋಗ ತಜ್ಞರು, ಚಿಕ್ಕ ಮಕ್ಕಳ ಚಿಕಿತ್ಸೆ ತಜ್ಞರು, ಎಲಬು ಮತ್ತು ಕೀಲುಗಳ ತಜ್ಞರು, ಕಿವಿ ಮತ್ತು ಮೂಗು ಗಂಟಲ ತಜ್ಞರು, ಸ್ವಾಸಕೋಶ ತಜ್ಞರು, ಕಣ್ಣಿನ ತಜ್ಞರು, ಚರ್ಮರೋಗ ತಜ್ಞರು, ಮಾನಸಿಕ ರೋಗ ತಜ್ಞರು, ದಂತ ಹಲ್ಲಿನ ತಜ್ಞರು, ಪಿಜಿಯೋ ಥರ್ಪಿ ಚಿಕಿತ್ಸೆ, ಈ ಎಲ್ಲಾ ಸೇವೆಗಳು ಲಭ್ಯವಿದ್ದು ಸಾರ್ವಜನಿಕರು ಭಾಗವಹಿಸಿ ಈ ಸೇವೆಯನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿದರು.

ಪ್ರಾಥಮಿಕ ಕೃಷಿ ಪತ್ತಿನ ಅಧ್ಯಕ್ಷರು ಸರ್ವ ಸದಸ್ಯರು ಪತ್ರಿಕಾ ಪ್ರಕಟಣೆ ತಿಳಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಸಾರ್ವಜನಿಕ ಆಸ್ತಿ ಮಾರಾಟ ಬೇಡ

ಸರಕಾರಿ ಯೋಜನೆಗಳು ಅರ್ಹರನ್ನು ತಲುಪುವಂತಾಗಬೇಕು ಎಂಬುದರಲ್ಲಿ ಯಾರಿಗೂ ಸಂಶಯ ಇಲ್ಲ. ಆದರೆ, ಸ್ಥಳೀಯ ಆವಶ್ಯಕತೆಗಳು, ಸ್ವಂತ ಬುದ್ಧಿಮತ್ತೆಗಳನ್ನು ಬದಿಗಿರಿಸಿ, ಕೃತಕ ಬುದ್ಧಿಮತ್ತೆ ಅಳವಡಿಸುವ ಹೆಸರಿನಲ್ಲಿ ಒಂದು ದೇಶ, ಒಂದು ಬುದ್ಧಿಮತ್ತೆ ಮಾನದಂಡವನ್ನು ಅಳವಡಿಸಿದರೆ, ಅದು ಸರಕಾರಿ ಕಲ್ಯಾಣ ಯೋಜನೆಗಳನ್ನೆಲ್ಲ ಊಟಕ್ಕಿಲ್ಲದ ಉಪ್ಪಿನಕಾಯಿ ಮಾಡಿಬಿಡುತ್ತದೆ. ಎಸ್‌ಐರ್ಆ ವಿಚಾರದಲ್ಲಿ ಅದನ್ನೀಗ ಇಡೀ ದೇಶ ಅನುಭವಿಸುತ್ತಿದೆ. ನಿದ್ರಿಸುತ್ತಿರುವ ರಾಜನ ಮೂಗಿನ ಮೇಲೆ ನೊಣ ಕುಳಿತಿದೆ ಎಂದು, ಅದನ್ನು ಕೊಲ್ಲಲು ಕತ್ತಿ ಹಿರಿದು, ಕಡೆಗೆ ರಾಜನನ್ನೇ ಕಡಿದು ಕೊಂದ ಬುದ್ಧಿವಂತ ಕೋತಿಯ ಪಂಚತಂತ್ರದ ಕಥೆ ಮತ್ತೆಮತ್ತೆ ನೆನಪಿಗೆ ಬರುತ್ತಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಗೆ (ಪಿಡಿಎಸ್) ಸಂಬಂಧಿಸಿದಂತೆ ಇಂತಹದೇ ಒಂದು ಬೆಳವಣಿಗೆ ಈಗ ಸದ್ದು ಮಾಡತೊಡಗಿದೆ. ಲೇಟೆಸ್ಟ್ ಬೆಳವಣಿಗೆ ಏನೆಂದರೆ, ಕಳೆದ ಆರು ತಿಂಗಳಿನಿಂದ ಪಡಿತರ ಪಡೆಯದಿರುವ ಸುಮಾರು 1.58 ಕೋಟಿ ಫಲಾನುಭವಿಗಳ ಪಡಿತರದ ಹಕ್ಕನ್ನು ನಿಷ್ಕ್ರಿಯಗೊಳಿಸಲು ಭಾರತ ಸರಕಾರ ನಿರ್ಧರಿಸಿದೆ ಎಂದು ಮಾಧ್ಯಮಗಳಲ್ಲಿ ವರದಿ ಆಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿರಬಹುದಾದ ಡೂಪ್ಲಿಕೇಟ್ ಮತ್ತು ಸಂಶಯಾಸ್ಪದ ಕಾರ್ಡುಗಳನ್ನು ನಿಷ್ಕ್ರಿಯಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆಯಂತೆ. ಇಂತಹ ಕಾರ್ಡುದಾರರ ಕಾರ್ಡುಗಳನ್ನು ಆರಂಭದಲ್ಲಿ ನಿಷ್ಕ್ರಿಯಗೊಳಿಸಿ, ಅವರು ಪ್ರಾಮಾಣಿಕ ಫಲಾನುಭವಿಗಳೆಂದು ಸಾಬೀತುಪಡಿಸಲು ಅವರಿಗೆ ಮೂರು ತಿಂಗಳ ಸಮಯಾವಕಾಶ ನೀಡಲಾಗುತ್ತದೆ. ಆ ಅವಧಿಯಲ್ಲಿ ಅವರು ಇ-ಕೈವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರೆ, ಅವರ ಪಡಿತರ ಕಾರ್ಡುಗಳನ್ನು ಪುನಃ ಸಕ್ರಿಯಗೊಳಿಸಲಾಗುವುದು, ಇಲ್ಲದಿದ್ದರೆ ಅದನ್ನು ಶಾಶ್ವತವಾಗಿ ರದ್ದು ಮಾಡಲಾಗುತ್ತದೆ ಎಂಬುದು ಈ ಸ್ವಚ್ಛತಾ ಅಭಿಯಾನದ ಹೂರಣ.

2013ರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ() ಅನ್ವಯ, ದೇಶದ ಸುಮಾರು ಶೇ. 70ಕ್ಕೂ ಮಿಕ್ಕಿ ಅರ್ಹ ಬಡಜನರಿಗೆ ಆಹಾರದ ಹಕ್ಕನ್ನು ಸರಕಾರ ನೀಡುತ್ತಾ ಬಂದಿದೆ. ಆದರೆ ಅದೇ ವೇಳೆಗೆ, ಈ ಪಡಿತರ ಆಹಾರವು ಕೇವಲ ಅರ್ಹರಿಗೆ ಮಾತ್ರ ಸಿಗುವಂತಾಗಲು ಸರಕಾರ ಸತತವಾಗಿ ಸ್ವಚ್ಛತಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರ ಫಲವಾಗಿ, 2013-14ರಿಂದ ಈಚೆಗೆ ದೇಶದಲ್ಲಿ ಸುಮಾರು 5.97 ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆಯಂತೆ. ಸರಕಾರವೇ ಸಂಸತ್ತಿನಲ್ಲಿ ಹೇಳಿರುವಂತೆ, ದೇಶದಲ್ಲೀಗ ಪಡಿತರ ಚೀಟಿ ಫಲಾನುಭವಿಗಳ ಡೇಟಾಬೇಸ್ ಶೇ. 100 ಡಿಜಿಟೈಸ್ ಮಾಡಲಾಗಿದ್ದು, ಶೇ. 99.7 ಪಡಿತರ ಚೀಟಿಗಳು, ಫಲಾನುಭವಿಗಳ ಆಧಾರ್ ಜೊತೆ ಲಿಂಕ್ ಆಗಿವೆ.

ಒಂದೆಡೆ, ಜನರಿಗೆ ಅವರು ಎಲ್ಲೇ ಇದ್ದರೂ ಪಡಿತರ ಸಿಗುವಂತಾಗಲು, ಒಂದು ದೇಶ ಒಂದು ಪಡಿತರ ಚೀಟಿ () ಯೋಜನೆ ರೂಪಿಸಲಾಗಿದೆಯಾದರೆ, ಇನ್ನೊಂದೆಡೆ ಪಡಿತರ ಚೀಟಿ ನಿರ್ವಹಣೆ, ವಿತರಣೆ, ಸರಬರಾಜು ಸರಪಣಿ, ಬಯೊಮೆಟ್ರಿಕ್ಸ್ ಆಧರಿತ ವ್ಯವಸ್ಥೆ, ಫಲಾನುಭವಿಗಳ ದೂರುಗಳ ಪರಿಹಾರಕ್ಕಾಗಿ ಎಐ ಆಧರಿತ ವ್ಯವಸ್ಥೆ ಇತ್ಯಾದಿಗಳನ್ನೆಲ್ಲ ಒಳಗೊಂಡ (-) ಎಂಬ ಚೌಕಟ್ಟು ರೂಪುಗೊಂಡಿದೆ.

ಇಷ್ಟೆಲ್ಲ ಕಡಿವಾಣಗಳಿರುತ್ತಲೇ, ಈಗ ಸರಕಾರವು ಆರು ತಿಂಗಳಿನಿಂದ ನಿಷ್ಕ್ರಿಯವಿದೆ ಎಂಬ ಕಾರಣಕ್ಕೆ ಸುಮಾರು ಒಂದೂವರೆ ಕೋಟಿ ಸೈಲೆಂಟ್ ಪಡಿತರ ಕಾರ್ಡುಗಳನ್ನು ನಿಷ್ಕ್ರಿಯಗೊಳಿಸುತ್ತಿರುವುದು ಸ್ವಲ್ಪ ಕಟುವಾದ ಕ್ರಮ ಎನ್ನಿಸುತ್ತದೆ.

ಏಕೆಂದರೆ, ಈ ನಿಷ್ಕ್ರಿಯಗೊಂಡ ಕಾರ್ಡುದಾರರು, ತಮ್ಮ ಪಡಿತರ ಕೇಂದ್ರಗಳ ಎದುರು ಸರತಿ ಸಾಲಿನಲ್ಲಿ ನಿಂತು, ತಾವು ಪ್ರಾಮಾಣಿಕ ಫಲಾನುಭವಿಗಳು ಎಂದು ಸಾಬೀತುಪಡಿಸಲು ಇ-ಕೈವೈಸಿ ದಾಖಲೆಗಳನ್ನು ಒಪ್ಪಿಸಬೇಕಾಗುತ್ತದೆ. ಮೂಲತಃ ಪ್ರಜೆಗಳಿಗೆ ಆಹಾರದ ಹಕ್ಕನ್ನು ಸಂವಿಧಾನಬದ್ಧವಾಗಿ ಅನುಷ್ಠಾನ ಮಾಡಬೇಕಾದ ಪಡಿತರ ವ್ಯವಸ್ಥೆಯು ಎಲ್ಲರನ್ನೂ ಒಳಗೊಳ್ಳುವ, ಯಾರೂ ಹಸಿವಿನಿಂದ ಮಲಗದಂತೆ ನೋಡುವ ಒಂದು ಮಾನವೀಯ ವ್ಯವಸ್ಥೆ. ಅದರ ಮೇಲೆ ನಿಗಾ ಇರಿಸಬೇಕಾದ ತನ್ನ ಜವಾಬ್ದಾರಿಯನ್ನು ಈಗ ಸರಕಾರವು ನೇರವಾಗಿ ಫಲಾನುಭವಿಗಳ ಮೇಲೆ ಹೊರಿಸಿದಂತಾಗಿದೆ. ತನ್ನ ಮಾನದಂಡಕ್ಕೆ ಹೊಂದಿಕೊಳ್ಳದ ಫಲಾನುಭವಿಯು ಪಡಿತರ ಪಡೆಯಲು ತನ್ನ ಅರ್ಹತೆಯನ್ನು ತಾನೇ ಸಾಬೀತುಪಡಿಸಿಕೊಳ್ಳುವುದು ಈಗ ಅನಿವಾರ್ಯ ಆದಂತಾಗಿದೆ. ದಿಲ್ಲಿಯಲ್ಲಿ ನಿರ್ಣಯವಾಗುವ ಈ ಮಾನದಂಡಗಳು ಸ್ಥಳೀಯವಾಗಿ ಪ್ರಸ್ತುತವೇ ಎಂಬುದನ್ನು ನಿರ್ಧರಿಸುವ ಹಕ್ಕು ನಿಜಕ್ಕೆಂದರೆ ರಾಜ್ಯ ಸರಕಾರಗಳು ಮತ್ತು ಸ್ಥಳೀಯಾಡಳಿತಗಳದ್ದಾಗಬೇಕಿತ್ತು.

ಸಾಂವಿಧಾನಿಕವಾಗಿ ಏಳನೇ ಷೆಡ್ಯೂಲಿನಲ್ಲಿ ಎಂಟ್ರಿ 33 ಮತ್ತು 34ರ ಅನ್ವಯ ಸಮವರ್ತಿ ಪಟ್ಟಿಯಲ್ಲಿ ಬರುವ ಪಿಡಿಎಸ್ ವಿಕೇಂದ್ರೀಕೃತ ವ್ಯವಸ್ಥೆಯನ್ನು ಕೇಂದ್ರೀಕೃತ ವ್ಯವಸ್ಥೆ ಮಾಡಿಕೊಳ್ಳುವ ಮೂಲಕ ಭಾರತ ಸರಕಾರವು ರಾಜ್ಯ ಸರಕಾರಗಳ ಮತ್ತೊಂದು ಹಕ್ಕನ್ನು ಕಿತ್ತುಕೊಂಡಂತಾಗಿದೆ.

ಪಿಡಿಎಸ್ ಆಹಾರಧಾನ್ಯಗಳು ಒಂದು ಮಟ್ಟಿಗೆ ದುರ್ಬಳಕೆ ಆಗುತ್ತಿರುವುದು ನಿಜ. ಅದನ್ನು ಪಡೆದವರು ಆ ಆಹಾರಧಾನ್ಯಗಳನ್ನು ಮಾರಿ ಹಣ ಪಡೆಯುವುದು ಇತ್ಯಾದಿಗಳೆಲ್ಲ ಅಲ್ಪ ಪ್ರಮಾಣದಲ್ಲಿ ನಡೆಯುತ್ತಿರುವುದೂ ಹೌದು. ಅದಕ್ಕೆ ಕಾರಣ ಸರಕಾರದ ನೀತಿಗಳಲ್ಲಿರುವ ಲೋಪವೇ ಹೊರತು, ಅಲ್ಲಿ ಫಲಾನುಭವಿಯ ಹಕ್ಕಿನ ಉಲ್ಲಂಘನೆ ಆಗಿಲ್ಲ. ಹೀಗೆ ಪಡಿತರ ಪಡೆದ ಆಹಾರದ ಯಾವ ಕಾಳುಗಳೂ ಕೂಡ ಸರಕಾರ ಸ್ವತಃ ತನ್ನ ದಾಸ್ತಾನು ಕೇಂದ್ರಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ ಕಾರಣಕ್ಕೆ ಪೋಲು ಮಾಡುತ್ತಿರುವ ಪ್ರಮಾಣದಲ್ಲಿ ಹಾಳಾಗುತ್ತಿಲ್ಲ. ಇಂತಹವುಗಳನ್ನೆಲ್ಲ ವಿಕೇಂದ್ರೀಕೃತ ಮತ್ತು ಪ್ರಾಮಾಣಿಕ ವ್ಯವಸ್ಥೆಯೊಂದರ ಮೂಲಕ ನಿಭಾಯಿಸಿದರೆ, ಇವೆಲ್ಲವೂ ವ್ಯವಸ್ಥಿತವಾಗಿಯೇ ನಡೆಯಬಲ್ಲವು. ಭಾರತ ಸರಕಾರ ಇಂತಹವನ್ನೆಲ್ಲ ಕೇಂದ್ರೀಕೃತಗೊಳಿಸಿದಷ್ಟೂ, ಅದರ ಅಡ್ಡಪರಿಣಾಮಗಳು ಹೆಚ್ಚು.

ಹಸಿದವರಿಗೆ ವಿತರಿಸಲೆಂದು ಸಂಗ್ರಹಿಸಿದ ಅಕ್ಕಿಯನ್ನು, ಎಥೆನಾಲ್ ಉತ್ಪಾದನೆಗೆಂದು ಉದ್ಯಮಪತಿಗಳಿಗೆ ಹಂಚುವಾಗ ಇಲ್ಲದ ನಿಯಮ ಕಾಠಿಣ್ಯ, ಬಡಪಾಯಿ ಪಡಿತರ ಫಲಾನುಭವಿಗಳ ಮೇಲೆ ಏಕೆ? ತಾವು ಪ್ರಾಮಾಣಿಕರೆಂದು ಸಾಬೀತು ಮಾಡದ ಹೊರತು ಎಲ್ಲರೂ ಕಳ್ಳರು ಎಂಬ ಲಾಜಿಕ್ ದೇಶದ ದೈನಂದಿನ ಬದುಕಿನ ಎಲ್ಲ ಮಗ್ಗುಲುಗಳಿಗೂ ಅಳವಡಿಕೆ ಆಗುತ್ತಿರುವುದು ಆತಂಕಕಾರಿ.

ಗಾಂಧೀ ಎಂದರೆ ಏನು?

ಆರೆಸ್ಸೆಸ್‌ಗೊಂದು ಕಿವಿಮಾತು

ಅದು ದೇಶ ವಿಭಜನೆಯ ಕಾಲ. ಎಲ್ಲೆಲ್ಲೂ ಹಿಂದೂ-ಮುಸ್ಲಿಂ ಗಲಭೆ. ಸಾವು-ನೋವುಗಳ ಸುದ್ದಿ. ಆ ಸ್ಥಳಗಳಿಗೆ ಖುದ್ದು ಭೇಟಿ ಮಾಡಲು ಗಾಂಧಿ ದೆಹಲಿಯಲ್ಲಿ ಬೀಡುಬಿಟ್ಟಿದ್ದಾರೆ. ಅಲ್ಲಿಗೆ ಎಲ್ಲ ಸಂಘಸಂಸ್ಥೆಗಳ ನಾಯಕರು ಬಂದುಹೋಗುತ್ತಿದ್ದಾರೆ. ಹಾಗೆಯೇ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ನಾಯಕರೊಬ್ಬರು ಕೂಡ ಬಂದರು. ಆದರೆ ಅದಕ್ಕೂ ಮುಂಚೆಯೇ ಗಾಂಧಿಗೆ ಗಲಭೆಗೆ ಕಾರಣರು ಯಾರು ಎಂಬ ಸುದ್ದಿ ಬಂದಿತ್ತು.

ಅದನ್ನು ಮರೆಮಾಚಲು ಆರ್‌ಎಸ್‌ಎಸ್ ನಾಯಕ, ''ನಾವು ಒಳ್ಳೆಯ ಜನ. ನಮ್ಮ ಸಂಘ ಯಾರನ್ನೂ ವೈರಿಗಳೆಂದು ಪರಿಗಣಿಸದು. ನಾವಿರುವುದು ಹಿಂದೂಗಳ ರಕ್ಷಣೆಗಾಗಿ. ಮುಸ್ಲಿಮರನ್ನು ಕೊಲ್ಲುವ ಉದ್ದೇಶ ನಮಗಿಲ್ಲ. ನಾವು ಶಾಂತಿಧೂತರು'' ಎಂದರು.

ಗಾಂಧೀ ಸುಮ್ಮನೇ ಇದ್ದರು. ಅವರೇ ಮುಂದುವರೆದು, ''ಸಂಘದ ಕಾರ್ಯಕರ್ತರು ನಿರಾಶ್ರಿತರ ಶಿಬಿರಗಳಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರ ಪರಿಶ್ರಮ ಪರಿಚಯ ಮಾಡಿಕೊಟ್ಟಿದ್ದಾರೆ'' ಎಂದು ಕೊಂಚ ಅಹಂಕಾರದಿಂದ ಹೇಳಿದರು.

ಆಗ ಗಾಂಧಿ, ''ಹಿಟ್ಲರನ ನಾಝಿಗಳು ಮತ್ತು ಮುಸಲೋನಿಯ ಫ್ಯಾಸಿಸ್ಟರು ಇದೇ ರೀತಿ ಮಾಡಿದ್ದರು ಎನ್ನುವುದನ್ನು ಮರೆಯಬೇಡಿ. ಸರ್ವಾಧಿಕಾರ ದೃಷ್ಟಿಕೋನವಿಟ್ಟುಕೊಂಡಿರುವ ಕೋಮುವಾರು ಸಂಸ್ಥೆ ನಿಮ್ಮದು'' ಸ್ಪಷ್ಟವಾಗಿ, ನೇರವಾಗಿ, ಹಿಂದುಮುಂದು ನೋಡದೆ ಹೇಳಿದರು.

ಸಂಘದ ನೇತಾರನಿಗೆ ಇರುಸುಮುರುಸಾದರೂ ತೋರಗೊಡದೆ, ತಮ್ಮ ಸಂಘದ ಸಮ್ಮೇಳನಕ್ಕೆ ಗಾಂಧಿಯನ್ನು ಆಹ್ವಾನಿಸಿದರು. ಗಾಂಧಿಗೇನು ಭಯ, ಬರುತ್ತೇನೆ ಎಂದರು. ಹೇಳಿದಂತೆ ಸಭೆಗೂ ಹೋದರು. ಅದೊಂದು ಬೃಹತ್ ಸಭೆ, ಆ ನಾಯಕ ಗಾಂಧೀಜಿಯನ್ನು ಸ್ವಾಗತಿಸುತ್ತಾ, ''ಹಿಂದೂ ಧರ್ಮ ಸೃಷ್ಟಿಸಿರುವ ಒಬ್ಬ ಮಹಾನ್ ಪುರುಷ ಇವರು'' ಎಂದರು.

ಗಾಂಧೀ ಅದರಿಂದ ಉಬ್ಬಿಹೋಗಲೂ ಇಲ್ಲ, ವಿಚಲಿತರೂ ಆಗಲಿಲ್ಲ. ಬದಲಿಗೆ ಅಷ್ಟೇ ಮಾರ್ಮಿಕವಾಗಿ ಉತ್ತರಿಸಿದರು. ''ನಾನು ನನ್ನನ್ನು ಹಿಂದೂ ಎಂದು ಕರೆದುಕೊಳ್ಳಲು ಗೌರವ ಎನಿಸುತ್ತದೆ. ಆದರೆ ನನ್ನ ಹಿಂದೂ ಧರ್ಮ ಅಸಹಿಷ್ಣು ಅಲ್ಲ. ಅದರಲ್ಲಿ ಎಲ್ಲ ಧರ್ಮಗಳ ಉತ್ತಮ ವಿಚಾರಗಳು ಸಮಾಗಮಗೊಂಡಿವೆ. ಇದೇ ಅದರ ವೈಶಿಷ್ಟ್ಯ. ಭಾರತದಲ್ಲಿ ಮುಸ್ಲಿಮರಿರಬಾರದು, ಪಾಕಿಸ್ತಾನದಲ್ಲಿ ಹಿಂದೂಗಳಿರಬಾರದು ಎಂಬುದು ಬಾಲಿಶ. ಎರಡೂ ತಪ್ಪು. ಇಸ್ಲಾಂ ಧರ್ಮದ ಬಗ್ಗೆ ಯಾವುದೇ ವೈರತ್ವವಿಲ್ಲ ಎನ್ನುವ ನಿಮ್ಮ ಆಶ್ವಾಸನೆಯಿಂದ ನನಗೆ ಸಂತೋಷವಾಗಿದೆ. ಆದರೆ ಮುಸ್ಲಿಮರ ಕೊಲೆಯಲ್ಲಿ ನಿಮ್ಮ ಸಂಘಟನೆಯ ಕೈವಾಡವಿದೆ ಎನ್ನುವ ಆರೋಪ ನಿಜವಾದಲ್ಲಿ ಅದರ ಪರಿಣಾಮ ಭಯಂಕರವಾದೀತು'' ಎಂದು ಹೇಳಿದರು.


ಅವರ ಬಿಚ್ಚುಮಾತು ನಾಯಕರಿಗೆ ಪಥ್ಯವಾಗಲಿಲ್ಲ. ಕೆಣಕಿದಂತಾಯಿತು. ಕೂಡಲೆ, ''ದುಷ್ಟರನ್ನು ಸಂಹರಿಸಲು ಹಿಂದೂ ಧರ್ಮ ಅನುಮತಿ ನೀಡದೇನು? ಇಲ್ಲ ಎನ್ನುವುದಾದರೆ ಗೀತೆಯ ಎರಡನೆಯ ಅಧ್ಯಾಯದಲ್ಲಿ ಕೌರವರನ್ನು ನಾಶಗೊಳಿಸುವಂತೆ ಶ್ರೀಕೃಷ್ಣ ಉಪದೇಶ ಮಾಡಿದ್ದನಲ್ಲಾ, ಆ ವಿಚಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?'' ಎಂದು ಮರುಪ್ರಶ್ನೆ ಎಸೆದರು.

''ಹೌದು ಮತ್ತು ಅಲ್ಲ. ನಿಮ್ಮ ಮೊದಲ ಪ್ರಶ್ನೆಗೆ ಈ ಎರಡೂ ಉತ್ತರ. ಸಂಹರಿಸುವುದಕ್ಕೆ ಮೊದಲು ಯಾರು ದುಷ್ಟರು ಎನ್ನುವುದನ್ನು ನಿರ್ಣಯಿಸುವ ಶಕ್ತಿ ನಮ್ಮಲ್ಲಿ ಬರಬೇಕು. ಅಂತಹ ಶಕ್ತಿ ನಮ್ಮಲ್ಲಿ ಬರಬೇಕಾದರೆ ನಾವು ಪೂರ್ಣ ನಿರ್ದೋಷಿಗಳಾಗಿರಬೇಕು. ಒಬ್ಬ ಪಾಪಿ ಇನ್ನೊಬ್ಬ ಪಾಪಿಯ ನ್ಯಾಯವನ್ನು ನಿರ್ಣಯಿಸಬಲ್ಲನೆ? ಅಥವಾ ಆತನನ್ನು ಗಲ್ಲಿಗೇರಿಸುವಂತೆ ಅಧಿಕಾರಯುತವಾಗಿ ಹೇಳಬಲ್ಲನೆ? ಇನ್ನು ಎರಡನೆ ಪ್ರಶ್ನೆ ಪಾಪಿಗೆ ದಂಡ ಕೊಡುವ ಅಧಿಕಾರ ಗೀತೆ ಒಪ್ಪಿಕೊಂಡಿದೆ ಎಂದೇ ಇಟ್ಟುಕೊಳ್ಳೋಣ. ಆದರೂ ಕಾನೂನಿನ ಮೂಲಕ ಅಸ್ತಿತ್ವಕ್ಕೆ ಬಂದಿರುವ ಸರ್ಕಾರದ ಉಪಯೋಗ ಮಾಡಿಕೊಳ್ಳಬೇಕು. ಹಾಗೆ ಮಾಡದೆ ನೀವು ಅದನ್ನು ಕೈಗೆತ್ತಿಕೊಳ್ಳುವುದಾದರೆ ಸರ್ಕಾರವೇಕಿರಬೇಕು? ನೀವೇ ಆಯ್ಕೆ ಮಾಡಿಕೊಂಡಿರುವ ನಾಯಕರಿರುವಾಗ, ಅವರು ಸೇವೆಗೆ ಸಿದ್ಧರಿರುವಾಗ, ಕಾನೂನನ್ನು ನಿಮ್ಮ ಕೈಗೆ ತೆಗೆದುಕೊಳ್ಳುವುದು ಅವರ ಪ್ರಯತ್ನಗಳನ್ನು ವಿಫಲಗೊಳಿಸಿದಂತೆ ನಿಮ್ಮ ನಾಯಕರನ್ನು ನೀವೇ ಅವಮಾನಿಸಿದಂತೆ'' ಎಂದರು.

ಇದು ಆರೆಸೆಸ್ ಸಭೆಯಲ್ಲಿ ಗಾಂಧಿ ಆರೆಸೆಸ್ಸಿಗರಿಗೇ ಹೇಳಿದ ಕಿವಿಮಾತು. ಇವತ್ತು ಹೀಗೆ ಹೇಳುವ ನೈತಿಕತೆಯನ್ನು ಎಷ್ಟು ಮಂದಿ ಉಳಿಸಿಕೊಂಡಿದ್ದಾರೆ?

ಹೆಣ್ಣು ಮಕ್ಕಳೇ ಏಕೆ ಪಾತ್ರೆ ತೊಳೆಯಬೇಕು?

ಆಶ್ರಮದಲ್ಲಿ ಸರದಿಯಂತೆ ಎಲ್ಲರೂ ಕೆಲಸ ಮಾಡುತ್ತಿದ್ದರು. ಅದರಲ್ಲಿ ಅಡುಗೆ ಮನೆಯ ಪಾತ್ರೆಗಳನ್ನು



ಸರದಿಯಂತೆ ತೊಳೆಯುವ, ತಿಕ್ಕುವ ಕೆಲಸವೂ ಒಂದು.

''ಊಟ ಮಾಡಿದ ತಟ್ಟೆಗಳನ್ನು ಅವರವರೇ ತೊಳೆಯುವುದರಿಂದ ಸಮಯ ಹಾಳಾಗುತ್ತದೆ. ಮೂರು ನಾಲ್ಕು ಜನ ಸೇರಿ ಪಾಳಿಯಂತೆ ಈ ಕೆಲಸ ಮಾಡುವುದೊಳಿತು. ಬೇರೆಯವರ ಎಂಜಲು ತಟ್ಟೆ ತೊಳೆಯುವಾಗ, ಈಗಿರುವ ನಮ್ಮ ಜಿಗುಪ್ಸಾ ಭಾವನೆ ಅಳಿದೀತು. ಪರಸ್ಪರ ಪ್ರೇಮಭಾವನೆ ವರ್ಧಿಸುವುದರಲ್ಲಿ ಈ ಪದ್ಧತಿ ತುಂಬಾ ಸಹಾಯಕ'' ಎಂದು ಎಲ್ಲರಿಗೂ ತಿಳಿಸಿ ಹೇಳಿದರು ಗಾಂಧೀಜಿ.

ಪಾತ್ರೆ ತೊಳೆಯುವ ಮೊದಲ ಪಾಳಿಗೆ ತಮ್ಮನ್ನು ಮತ್ತು ಕಸ್ತೂರ ಬಾ ಅವರ ಹೆಸರನ್ನು ಸೂಚಿಸಿದರು. ಇದನ್ನು ಕೇಳಿ ಅಲ್ಲಿದ್ದವರಿಗೆ ಆಶ್ಚರ್ಯ. ದೊಡ್ಡವರು ಇಂತಹ ತೊಳೆಯುವ ಕೆಲಸ ಮಾಡುವುದೆ? ಅನೇಕರು ಈ ವಿಷಯದಲ್ಲಿ ಗೊಣಗಿದ್ದೂ ಉಂಟು.

ಎಂಜಲಾಗಿ ಕೊಳಕಾಗಿರುವ ಸ್ಥಳಗಳನ್ನು ಗುಡಿಸಿ ಚೊಕ್ಕಟ ಮಾಡುವುದು ನಿಜವಾದ ಪುಣ್ಯ ಕಾರ್ಯ. ಕೊಳಕು ಮಾಡಿ ಚಾಕರಿ ಮಾಡಿಸಿಕೊಳ್ಳುವುದರಲ್ಲಿ ಆತ್ಮದರ್ಶನ ಲಭ್ಯವಾಗದು. ಶುಚಿತ್ವ ಆತ್ಮದರ್ಶನ ಮಾಡಿಸುವ ಕೈಗನ್ನಡಿ. ಹೀಗಿದ್ದೂ ಶುದ್ಧೀಕರಣದ ವಿಷಯದಲ್ಲಿ ಬೇರೆ ವರ್ಗವನ್ನು ಸೃಷ್ಟಿಸಿಕೊಂಡಿದ್ದೇವೆ. ಶುದ್ಧೀಕರಣ ಮಾಡುವ ಕಾರ್ಯ ಮೈಲಿಗೆ ಎನ್ನುವ ಭಾವನೆ ರೂಢಿಯಲ್ಲಿದೆ. ಇದು ತಪ್ಪು ತಿಳಿವಳಿಕೆ. ಇದನ್ನು ಅಲ್ಲಗಳೆಯಲೆಂದೇ ಗಾಂಧೀಜಿ ಶುದ್ಧೀಕರಣ ಕಾರ್ಯಕ್ಕೆ ಕೈ ಹಾಕಿದರು.

ಆಶ್ರಮವಾಸಿಗಳಿಗೆ ಏನೋ ಒಂದು ಬಗೆಯ ಕಸಿವಿಸಿ. ತೊಳೆಯುವ ಜಾಗದಲ್ಲಿ ನಿಂತಿದ್ದ ಗಾಂಧೀಜಿಯನ್ನು ನೋಡುತ್ತಾ ಮರು ಮಾತಾಡದೆ ಒಬ್ಬೊಬ್ಬರೂ ತಟ್ಟೆಯನ್ನಿಟ್ಟು ಹೋಗುತ್ತಿದ್ದರು. ಅವರ ತಟ್ಟೆಗಳನ್ನು ಒಂದೊಂದಾಗಿ ಎತ್ತಿಕೊಂಡು ಬಾ ಮತ್ತು ಬಾಪೂ ತೊಳೆಯುವ ಕೆಲಸದಲ್ಲಿ ನಿರತರಾದರು.

''ಮನಸ್ಸಿದ್ದರೆ ಎಂತಹ ಕೆಲಸ ಬೇಕಾದರೂ ಮಾಡಬಹುದು. ನಮ್ಮ ಮನೆಗಳಲ್ಲಿ ಮಾಡುವುದಿಲ್ಲವೆ? ಹೆಣ್ಣುಮಕ್ಕಳೇ ಮನೆಯ ಪಾತ್ರೆಗಳನ್ನು ತೊಳೆಯುತ್ತಾರೆ. ಹಾಗೆಯೇ ಇದೂ ಒಂದು ನಮ್ಮ ಪರಿವಾರ. ಪ್ರಮಾಣದಲ್ಲಿ ದೊಡ್ಡದು. ನಾವು ಹೆಣ್ಣು-ಗಂಡುಗಳ ಭೇದವನ್ನು ಅಳಿಸಿಹಾಕಬೇಕು. ಎಂತಲೇ ನಾನು ಅಡುಗೆಯ ಜವಾಬ್ದಾರಿಯನ್ನು ಮಹಿಳೆಯರಿಗೆ ವಹಿಸಿ ಕೊಟ್ಟಿಲ್ಲ. ಕೆಲಸದ ವಿಷಯದಲ್ಲಿ ಸ್ತ್ರೀ-ಪುರುಷ ಎನ್ನುವ ಭೇದ ಇರಕೂಡದು. ಇಂತಹ ಸಾಮೂಹಿಕ ವ್ಯವಸ್ಥೆಯಲ್ಲಿ ಕೌಟುಂಬಿಕ ಭಾವನೆ ಬೆಳೆಯುತ್ತದೆ. ಬಂದವರಿಗೆ ಊಟ ಬಡಿಸುವುದಿದೆಯಲ್ಲಾ, ಅದು ಆಧ್ಯಾತ್ಮಿಕ ಭಾವನೆಗೆ ಪೂರಕ. ಅದೇ ನಿಜವಾದ ಸೇವೆ.''

''ಪ್ರತಿಯೊಂದು ಕೆಲಸವು ಭಕ್ತಿಮಯವಾಗಬೇಕು. ಸೇವಾಮಯವಾಗಬೇಕು. ಆಗ ಅದರ ಸಾರ್ಥಕತೆ. ಶ್ರೀರಾಮನಿಗೆ ಬೋರೇಹಣ್ಣು ತಿನ್ನಿಸಿದಳು ಶಬರಿ, ಅದರಲ್ಲೇನಿತ್ತು? ಎಲ್ಲೂ ಸಿಗದಂಥ ಹಣ್ಣುಗಳೇ ಅವು? ತನ್ನ ಪ್ರೀತಿಯನ್ನು ಆಕೆ ಜೇನಾಗಿ ಹಿಂಡಿದ್ದಳು ಅದರಲ್ಲಿ.''

ಗಾಂಧೀಜಿಯ ಒಂದೊಂದು ಮಾತಿನಲ್ಲಿ ಅಮೃತ ಹನಿಯುತ್ತಿತ್ತು. ಜೀವನವನ್ನು ಆಧ್ಯಾತ್ಮಕವಾಗಿಸುವ ಕಲೆಯನ್ನು ಅವರು ಬಲು ಚೆನ್ನಾಗಿ ಅರಿತಿದ್ದರು. ಅವರ ಸನಿಹಕ್ಕೆ ಬಂದವರಿಗೆಲ್ಲ ಇದೇ ಶಿಕ್ಷಣ. ಬರಿ ಗೊಡ್ಡು ಕರ್ಮವಲ್ಲ. ಕರ್ಮದಲ್ಲಿ ಯೋಗವನ್ನು ಎರಕ ಹೊಯ್ದ ಕರ್ಮ ಕುಶಲಿ.

ಅಂತರಾತ್ಮದ ಸಂಶೋಧನೆ ಮುಖ್ಯ

1927ರಲ್ಲಿ ಬೆಂಗಳೂರಿನ ಸೈನ್ಸ್ ಇನ್ಸ್‌ಟಿಟ್ಯೂಟ್‌ಗೆ ಬಂದಿದ್ದ ಗಾಂಧಿ ಅಲ್ಲಿನ ವಿಭಾಗಗಳ ಪರಿಚಯ ಮಾಡಿಕೊಂಡು ಸಂಪ್ರೀತರಾದಂತೆ ಕಾಣಲಿಲ್ಲ. ಅವರ ಭಾವನೆಗಳೇನೆಂಬುದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದಾಗ ಸ್ಪಷ್ಟವಾಗಿತ್ತು.

''ನಾನೆಲ್ಲಿಗೆ ಬಂದಿದ್ದೇನೆಂದು ಅಚ್ಚರಿಯಾಗುತ್ತಿದೆ. ನನ್ನಂತಹ ಹಳ್ಳಿಗನಿಗೆ ಇದು ಸರಿಯಾದ ಸ್ಥಳವಲ್ಲ. ನಾನು ಮಾತಿಲ್ಲದ ಬೆರಗಿನಿಂದ ನಿಲ್ಲಬಲ್ಲೆನಷ್ಟೇ. ನಾನು ಹೇಳಬೇಕೆಂದಿರುವುದಿಷ್ಟೇ: ನೀವಿಲ್ಲಿ ನೋಡುತ್ತಿರುವ ಬೃಹತ್ ಪ್ರಯೋಗಾಲಯಗಳು ಮತ್ತು ಅವುಗಳ ಉಪಕರಣಗಳು ಮಿಲಿಯಗಟ್ಟಲೆ ಜನರ ಶ್ರಮದ ಹಣದ ಫಲ. ಟಾಟಾರ ಮೂವತ್ತು ಲಕ್ಷ ರೂಪಾಯಿಗಳಾಗಲೀ ಅಥವಾ ಮೈಸೂರು ಸರ್ಕಾರದ ಧನವಾಗಲೀ ಎಲ್ಲಿಂದಲೋ ಬಂದದ್ದಲ್ಲ. ಈ ದರಿದ್ರ ನಾಡಿನ ಜನರ ಶ್ರಮದಿಂದಲೇ ಬಂದದ್ದು.

''ಹಳ್ಳಿಯ ಮಂದಿಯನ್ನು ನಾವೇನಾದರೂ ಭೇಟಿಯಾಗಿ ನೀವು ಬೆವರು ಹರಿಸಿ ದುಡಿದುಕೊಟ್ಟ ಹಣವನ್ನು ಕಟ್ಟಡ ಮತ್ತು ಪ್ರಯೋಗಾಲಯಗಳ ನಿರ್ಮಾಣಕ್ಕಾಗಿ ಉಪಯೋಗಿಸುತ್ತೇವೆ, ಅವುಗಳಿಂದ ನಿಮ್ಮ ಮುಂದಿನ ತಲೆಮಾರಿಗೆ ಉಪಯೋಗವಾಗುತ್ತದೆ ಎಂದೆಲ್ಲ ಹೇಳಿದರೆ ಅವರಿಗೆ ಹೇಗೆ ತಾನೇ ಅರ್ಥವಾದೀತು? ಅವರು ನಮಗೆ ಬೆನ್ನು ಮಾಡಿ ಹೊರಟುಹೋಗುತ್ತಾರೆ ಅಷ್ಟೇ. ನಾವೆಂದೂ ಹಳ್ಳಿಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ.

''ಪ್ರಯೋಗಾಲಯಗಳಲ್ಲಿ ಉಪಯೋಗಿಸುವ ರಾಸಾಯನಿಕ ವಸ್ತುಗಳನ್ನು ಪರಿಶೋಧಿಸಲು ವರ್ಷಾನುಗಟ್ಟಲೆ ಬೇಕೆಂದು ನಿಮ್ಮ ಪ್ರೊಫೆಸರ್ ನನಗೆ ಹೇಳಿದರು. ಆದರೆ ಈ ಹಳ್ಳಿಗಳನ್ನು ಪರಿಶೋಧಿಸುವವರು ಯಾರು? ನಿಮ್ಮ ಪ್ರಯೋಗಾಲಯಗಳಲ್ಲಿ ಇಪ್ಪತ್ನಾಲ್ಕು ಗಂಟೆಗಳಾದರೂ ಸಂಶೋಧನೆ ನಿರಂತರವಾಗಿ ನಡೆಯುತ್ತಿರುವಂತೆ ನಿಮ್ಮ ಹೃದಯದ ಒಂದು ಮೂಲೆಯಲ್ಲಿ ಮಿಲಿಯಗಟ್ಟಲೇ ಬಡಜನರ ಅಭಿವೃದ್ಧಿಯ ಸಂಗತಿ ಬಿಸಿಯಾಗಿರಲಿ.

''ನಮ್ಮ ಕೈಯಲ್ಲಾದುದನ್ನು ಮಾಡಿದ್ದೇವೆ, ಬನ್ನಿ ಇನ್ನು ಬಿಲಿಯರ್ಡ್ಸ್ ಮತ್ತು ಟೆನ್ನಿಸ್ ಆಡೋಣ ಎನ್ನುವ ಧೋರಣೆ ಬೇಡ. ಕ್ರೀಡಾಂಗಣದಲ್ಲಿ ಕೂಡ ನಿಮ್ಮನ್ನು ಋಣದ ಭಾರ ಕಾಡುತ್ತಿರಬೇಕು. ನಿಮ್ಮೆಲ್ಲರ ಸಂಶೋಧನೆಗಳ ಅಂತಿಮ ಗುರಿ ಬಡವರ ಉದ್ಧಾರವಾಗಿರಬೇಕು. ಇಲ್ಲದಿದ್ದರೆ ನಿಮ್ಮ ಪ್ರಯೋಗಾಲಯಗಳಿಗೂ ಸೈತಾನನ ಕಾರ್ಯಾಗಾರಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ.''

ಹರಿಜನರಿಗಿಲ್ಲದ ದೇವಸ್ಥಾನ ನಮಗೂ ಬೇಡ

ಒಮ್ಮೆ ಗಾಂಧೀಜಿ ಪುರಿಗೆ ಹೋಗಿದ್ದರು. ಅಲ್ಲಿಯ ಪ್ರಸಿದ್ಧ ಜಗನ್ನಾಥ ದೇವಸ್ಥಾನದ ಬಾಗಿಲಲ್ಲಿ, ''ಹಿಂದೂಗಳ ಹೊರತು ಮತ್ಯಾರಿಗೂ ಪ್ರವೇಶ ಇಲ್ಲ'' ಎಂದು ಬೋರ್ಡ್ ಹಾಕಿದ್ದನ್ನು ಕಂಡು, ಆ ಬೋರ್ಡ್ ತೆಗೆಯಬೇಕು ಹಾಗೂ ಮಂದಿರಕ್ಕೆ ಹರಿಜನರಿಗೆ ಪ್ರವೇಶ ನೀಡಬೇಕೆಂದು ಗಾಂಧಿ ಆಗ್ರಹಿಸಿದರು. ಆದರೆ ದೇವಸ್ಥಾನದವರು ಹರಿಜನರಿರಲಿ, ಗಾಂಧೀಜಿಯನ್ನೂ ಒಳಗೆ ಬಿಡದೆ ತಡೆದರು. ಅಷ್ಟೇ ಅಲ್ಲ ಅವರ ಮೇಲೆ ಹಲ್ಲೆಯನ್ನೂ ಮಾಡಿದರು.

ಇದಾದ ಮೇಲೆ ಗಾಂಧಿ ಪುರಿ ಸಮ್ಮೇಳನದ ಅಂಗವಾಗಿ ಮತ್ತೊಂದು ಬಾರಿ ಪುರಿಗೆ ಹೋಗಿದ್ದರು. ಗ್ರಾಮೋದ್ಯೋಗ ಮತ್ತು ಅಭಿವೃದ್ಧಿಯ ಪ್ರದರ್ಶನವನ್ನು ಉದ್ಘಾಟಿಸಿ ಮಾಡಿದ ಭಾಷಣದಲ್ಲಿ, ''ಎಲ್ಲಿಯವರೆಗೆ ಪುರಿ ಜಗನ್ನಾಥ ದೇವಸ್ಥಾನಕ್ಕೆ ಹರಿಜನರನ್ನು ಬಿಡುವುದಿಲ್ಲವೋ ಅಲ್ಲಿಯವರೆಗೆ ಅದನ್ನು ಜಗನ್ನಾಥನ ದೇವಸ್ಥಾನ ಎಂದು ಕರೆಯಲಾಗದು. ಅದನ್ನು ಅಲ್ಲಿರುವ ಪೂಜಾರಿಗಳ ಒಡೆತನದ ದೇವಸ್ಥಾನ ಎಂದಷ್ಟೇ ಕರೆಯಬಹುದು'' ಎಂದು ಬಹಿರಂಗವಾಗಿಯೇ ಟೀಕಿಸಿದ್ದರು.

ಇದಾಗಿ ಎಷ್ಟೋ ದಿನಗಳ ನಂತರ ಕಸ್ತೂರ್ ಬಾ ಪುರಿಗೆ ಹೋಗಬೇಕಾಗಿಬಂತು. ಅವರೊಂದಿಗೆ ಮಹದೇವ ದೇಸಾಯಿ, ಮತ್ತವರ ಪತ್ನಿ ಕೂಡ ಇದ್ದರು. ಪುರಿಗೆ ಬಂದಿರುವುದರಿಂದ ಜಗನ್ನಾಥ ಮಂದಿರಕ್ಕೆ ಹೋಗುವ ಇಚ್ಛೆಯನ್ನು ಕಸ್ತೂರ್ ಬಾ ವ್ಯಕ್ತಪಡಿಸಿದರು. ಮಹದೇವ ದೇಸಾಯಿರ ಪತ್ನಿ ಮತ್ತು ಬಾ ಇಬ್ಬರೂ ಮಂದಿರಕ್ಕೆ ಹೋಗಿ ದೇವರ ದರ್ಶನ ಮಾಡಿ ಬಂದರು. ಅವರ ಮುಖದಲ್ಲಿ ಸಂಪೂರ್ಣ ತೃಪ್ತಿ ತುಂಬಿತ್ತು.

''ಶ್ರೀಮತಿ ಗಾಂಧಿ ದೇವಸ್ಥಾನದೊಳಗೆ ಹೋಗಿ ಬಂದರಂತೆ'' ಎಂಬ ಗುಸುಗುಸು ಪುರಿ ಪಟ್ಟಣದ ತುಂಬ ಹರಡಿತು. ಇದು ಹೇಗೋ ಬಾಪು ಕಿವಿಗೂ ತಲುಪಿತು.

ಬಾ ಪುರಿಗೆ ಹೋದರೂ ದೇವಸ್ಥಾನಕ್ಕೆ ಹೋಗಲಾರರು ಮತ್ತು ಸಮುದ್ರ ಸ್ನಾನ ಮಾಡಿ ಬರುತ್ತಾರೆಂದು ನಂಬಿದ್ದ ಗಾಂಧಿಗೆ ಇದು ಸಹಿಸಲಸಾಧ್ಯ ನೋವನುಂಟುಮಾಡಿತು. ತೀವ್ರ ಆಘಾತಕ್ಕೊಳಗಾದರು. ಮಹದೇವ್‌ರನ್ನು ಕರೆದು ಬಾಪು, ''ನೀನು ದೊಡ್ಡ ತಪ್ಪು ಮಾಡಿದೆ. ಇವರೆಲ್ಲರಿಗೆ ಹಿಂದೆ ನಡೆದದ್ದನ್ನು ತಿಳಿಸಿ ಹೇಳುವುದು ನಿನ್ನ ಕರ್ತವ್ಯವಾಗಿತ್ತು. ಪುರಿಯಲ್ಲಿ ನನ್ನ ಮೇಲಾದ ಹಲ್ಲೆಯ ಬಗ್ಗೆ ತಿಳಿಸಬೇಕಿತ್ತು. ವಿಷಯವನ್ನು ಅರ್ಥ ಮಾಡಿಸುವ ಹೊಣೆ ನಿನ್ನದಾಗಿತ್ತು. ಇಂದು ಹರಿಜನರು ನಾವು ಮೋಸಗಾರರು ಎಂದುಕೊಂಡರೆ ಅದರಲ್ಲಿ ತಪ್ಪಿಲ್ಲ. ಅವರೇಕೆ ಹಾಗೆ ಅಂದುಕೊಳ್ಳಬಾರದು. ಅವರಿಗೆ ಪ್ರವೇಶವಿಲ್ಲದ ದೇವಸ್ಥಾನಕ್ಕೆ ನಾವು ಹೋಗುತ್ತೇವೆ ಎಂದಾದರೆ, ಅವರು ನಮ್ಮನ್ನು ತಮ್ಮವರು ಎಂದು ಹೇಗೆ ನಂಬಿಯಾರು?'' ಎಂದು ವೇದನೆಯಿಂದಲೇ ಹೇಳಿದರು.

ಅಷ್ಟೇ ಅಲ್ಲ, ಸೇವಾ ಸಂಘದ ಸದಸ್ಯರನ್ನು ಕರೆದ ಬಾಪು, ''ಬಾ ದೇವಸ್ಥಾನಕ್ಕೆ ಹೋಗದೆ ಬಂದಿದ್ದರೆ ಚೆನ್ನಾಗಿತ್ತು. ನಾನೀಗ ಹಳ್ಳದಲ್ಲಿ ಬಿದ್ದಿದ್ದೇನೆ. ನನ್ನ ಕೆಲಸದಲ್ಲಿನ ಆಧಾರವೇ ಕುಸಿದು ಬಿದ್ದಂತಾಗಿದೆ. ತಾವೇನು ಮಾಡುತ್ತಿದ್ದೀವಿ ಎಂಬುದರ ಅರಿವು ಇವರಿಗೆ ಇರಲಿಲ್ಲ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅವರಿಗೆ ತಿಳಿವಳಿಕೆ ಹೇಳದೇ ಇದ್ದ ತಪ್ಪು ನಮ್ಮದೆ'' ಎಂದು ಅರಿಕೆ ಮಾಡಿಕೊಂಡು ತಮ್ಮ ತಪ್ಪಿಗೆ ಪಶ್ಚಾತ್ತಾಪ ವ್ಯಕ್ತಪಡಿಸಿದರು.

ಆಳವಾದ ಧರ್ಮ-ವಿವೇಕದ ಪ್ರಜ್ಞೆಯುಳ್ಳ ಮತ್ತು ಐವತ್ತು ವರ್ಷಕ್ಕೂ ಮೀರಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ ಬಂದಿ ಗಾಂಧೀಜಿಯವರ ನಡೆ-ನುಡಿ ಒಂದೇ ಆಗಿತ್ತು ಎಂಬುದನ್ನು ಇದು ತೋರುತ್ತದೆ.

ಪೈಲಟ್ ಗಾಯಗೊಂಡ ನಂತರ ಫ್ಲೈದುಬೈ ವಿಮಾನ ನಡೆಸಿದವರು ಯಾರು? ವಿಮಾನದ ಕಾಕ್‌ಪಿಟ್ ಹೇಗಿರುತ್ತದೆ ಬಲ್ಲಿರಾ?

ಬುಧವಾರ ದುಬೈನಿಂದ ಇಸ್ರೇಲ್‌ನ ಟೆಲ್ ಅವೀವ್‌ಗೆ ಹಾರಾಟದಲ್ಲಿದ್ದ 1073 ವಿಮಾನದಲ್ಲಿ ನಡೆದ ಪ್ರಕರಣವು ಕಾಕ್‌ಪಿಟ್‌ನೊಳಗಿನ ಸುರಕ್ಷತೆ ಕುರಿತು ಪ್ರಶ್ನೆಗಳನ್ನು ಹುಟ್ಟಿ ಹಾಕಿದೆ.

ಈ ವಿಮಾನದ ಯೆಮೆನ್ ಮೂಲದ ಸಹ-ಪೈಲಟ್, ಹರಿತ ವಸ್ತುವಿನಿಂದ ಪೈಲಟ್ ಮೇಲೆ ದಾಳಿ ಮಾಡಿ ವಿಮಾನದ ನಿಯಂತ್ರಣವನ್ನು ತನ್ನ ಕೈಗೆ ತೆಗೆದುಕೊಳ್ಳಲು ವಿಫಲ ಪ್ರಯತ್ನ ನಡೆಸಿರುವ ವರದಿಯಾಗಿದೆ.

ಕಾಕ್‌ಪಿಟ್ ಎಂಬುದು ವಿಮಾನದ ಮುಂದಿನ ತುದಿಯ ಭಾಗವಾಗಿದ್ದು, ಇಲ್ಲಿಂದ ಪೈಲಟ್‌ಗಳು ವಿಮಾನದ ಹಾರಾಟವನ್ನು ನಿಯಂತ್ರಿಸುತ್ತಾರೆ. ದೊಡ್ಡ ಪ್ರಯಾಣಿಕ ವಿಮಾನಗಳ ಕಾಕ್‌ಪಿಟ್‌ನಲ್ಲಿ ಸಾಮಾನ್ಯವಾಗಿ ಎರಡು ಪೈಲಟ್‌ಗಳ ಆಸನಗಳಿರುತ್ತವೆ: ಒಂದು ಪೈಲಟ್‌ಗೆ ಮತ್ತೊಂದು ಸಹಪೈಲಟ್‌ಗೆ. ವಿಮಾನವನ್ನು ತಿರುಗಿಸಲು, ಮೇಲಕ್ಕೆತ್ತಲು, ಕೆಳಕ್ಕೆ ಇಳಿಸಲು ಮತ್ತು ಎಂಜಿನ್‌ನ ಶಕ್ತಿಯನ್ನು ನಿಯಂತ್ರಿಸಲು ಇಲ್ಲಿ ಚಾಲನ ಸಾಧನಗಳಿರುತ್ತವೆ. ವಿಮಾನದ ಎತ್ತರ, ವೇಗ, ದಿಕ್ಕು, ಎಂಜಿನ್‌ನ ಸ್ಥಿತಿ, ವಿಮಾನದ ಸ್ಥಳ, ಹವಾಮಾನ/ರಡಾರ್ ಮಾಹಿತಿ ಮತ್ತು ಎಚ್ಚರಿಕೆ ಸಂದೇಶಗಳನ್ನು ತೋರಿಸುವ ಡಿಜಿಟಲ್ ಪರದೆಗಳು ಮತ್ತು ಚಾಲನೆ ಸಾಧನಗಳಿರುತ್ತವೆ. ರೇಡಿಯೋ ಸಂಪರ್ಕ ವ್ಯವಸ್ಥೆಗಳ ಮೂಲಕ ಪೈಲಟ್‌ಗಳು ಏರ್ ಟ್ರಾಫಿಕ್ ಕಂಟ್ರೋಲ್, ಏರ್‌ಲೈನ್‌ನ ಕಾರ್ಯಾಚರಣೆ ವಿಭಾಗ ಮತ್ತು ಕ್ಯಾಬಿನ್ ಸಿಬ್ಬಂದಿಯೊಂದಿಗೆ ಸಂಪರ್ಕದಲ್ಲಿರುತ್ತಾರೆ.

ನ್ಯಾವಿಗೇಷನ್ ಮತ್ತು ಆಟೋಮೇಷನ್ ವ್ಯವಸ್ಥೆಗಳು: ಇವುಗಳಲ್ಲಿ ಫ್ಲೈಟ್ ಮ್ಯಾನೇಜ್‌ಮೆಂಟ್ ಸಿಸ್ಟಂ ಮತ್ತು ಆಟೋಪೈಲಟ್ ಕಂಟ್ರೋಲ್ ಸೇರಿವೆ. ಚೆಕ್‌ಲಿಸ್ಟ್‌ಗಳು, ತುರ್ತು ನಿಯಂತ್ರಣ ಮತ್ತು ಸುರಕ್ಷತಾ ಸಾಧನಗಳಿರುತ್ತವೆ. ಇಬ್ಬರು ಪೈಲಟ್‌ಗಳ ಆಸನಗಳ ಹಿಂದೆ ಸಾಮಾನ್ಯವಾಗಿ ಹೆಚ್ಚುವರಿ ನಿರೀಕ್ಷಕ ಅಥವಾ ಜಂಪ್ ಸೀಟ್ ಕೂಡ ಕಾಣಬರುತ್ತದೆ.

ಕಾಕ್‌ಪಿಟ್ ಮತ್ತು ಪ್ರಯಾಣಿಕರ ಕ್ಯಾಬಿನ್ ನಡುವೆ, ಸದಾ ಲಾಕ್ ಮಾಡಿರುವ ಭದ್ರ ಬಾಗಿಲು ಇರುತ್ತದೆ. ಬಲವಂತ ಪ್ರವೇಶವನ್ನು ತಡೆಯಲು ಮತ್ತು ಸಣ್ಣ ಶಸ್ತ್ರಾಸ್ತ್ರಗಳ ಗುಂಡುಗಳು ಮತ್ತು ಗ್ರೆನೇಡ್‌ಗಳ ಚೂರುಗಳಿಂದಲೂ ರಕ್ಷಣೆ ನೀಡುವಂತೆ ಈ ಬಾಗಿಲುಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಹೀಗಾಗಿ ಅಧಿಕೃತ ಕ್ಯಾಬಿನ್ ಸಿಬ್ಬಂದಿ ಮಾತ್ರವೇ ಕಾಕ್‌ಪಿಟ್ ನ್ನು ಪ್ರವೇಶಿಸಬಹುದು. ಪ್ರಯಾಣಿಕರು ಅಥವಾ ಯಾವುದೇ ಅನಧಿಕೃತ ವ್ಯಕ್ತಿಯು ವಿಮಾನದ ನಿಯಂತ್ರಣವನ್ನು ತನ್ನ ಕೈಗೆ ತೆಗೆದುಕೊಳ್ಳುವುದನ್ನು ತಡೆಯುವುದು ಈ ಸುರಕ್ಷತಾ ವ್ಯವಸ್ಥೆಯ ಉದ್ದೇಶ.

ದುಬೈನಿಂದ ಇಸ್ರೇಲ್ ರಾಜಧಾನಿ ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ಬೋಯಿಂಗ್ -737 ಮ್ಯಾಕ್ಸ್ 8 ವಿಮಾನದಲ್ಲಿ 174 ಮಂದಿ ಪ್ರಯಾಣಿಕರಿದ್ದರು. ಕಾಕ್‌ಪಿಟ್‌ನಲ್ಲಿ ಹಿಂಸಾತ್ಮಕ ಘರ್ಷಣೆಯ ಬಳಿಕ ವಿಮಾನವನ್ನು ಸೌದಿ ಅರೇಬಿಯಾದ ತಬೂಕ್ ಕಡೆಗೆ ತಿರುಗಿಸಲಾಯಿತು. ಪ್ರಯಾಣಿಕರು ಮತ್ತು ಸಿಬ್ಬಂದಿ ಒಟ್ಟಾಗಿ ಆರೋಪಿ ದಾಳಿಕೋರನನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ವಿಮಾನದಲ್ಲಿದ್ದ ಫ್ಲೈದುಬೈಯ ಇಬ್ಬರು ಪೋಜಿಷನಿಂಗ್ ಪೈಲಟ್‌ಗಳು ವಿಮಾನದ ನಿಯಂತ್ರಣವನ್ನು ವಹಿಸಿಕೊಂಡು ಅದನ್ನು ಸುರಕ್ಷಿತವಾಗಿ ನೆಲಕ್ಕಿಳಿಸಿದ್ದಾರೆ. ವಿಮಾನ ಮೊದಲು 7700 ಎಂಬ ಸಾಮಾನ್ಯ ತುರ್ತು ಕೋಡ್ ಕಳುಹಿಸಿತು. ನಂತರ 7500 ಕೋಡ್ ಕಳುಹಿಸಲಾಯಿತು. ಇದು ಅನಧಿಕೃತ ಹಸ್ತಕ್ಷೇಪದ ಸಂಕೇತ. ತರುವಾಯ ಇಸ್ರೇಲಿ ಯುದ್ಧವಿಮಾನಗಳಿಗೆ ಎಚ್ಚರಿಕೆ ರವಾನಿಸಲಾಗಿದೆ.

ಎಲ್ಲ ಸಂದರ್ಭಗಳಲ್ಲಿಯೂ ಕಾಕ್ ಪಿಟ್ ನಲ್ಲಿ ಇಬ್ಬರು ಅಧಿಕೃತ ವ್ಯಕ್ತಿಗಳು ಇರಲೇಬೇಕು. ಇಬ್ಬರು ಪೈಲಟ್‌ಗಳಲ್ಲಿ ಒಬ್ಬರು ಶೌಚಾಲಯಕ್ಕೆ ಹೋಗಲು ಅಥವಾ ಬೇರೆ ಕಾರಣಕ್ಕಾಗಿ ಹೊರಹೋದರೆ ಅವರು ಮರಳುವ ತನಕ ತರಬೇತಿ ಪಡೆದ ಕ್ಯಾಬಿನ್ ಸಿಬ್ಬಂದಿಯ ಬದಲಿ ಸದಸ್ಯರೊಬ್ಬರು ಕಾಕ್‌ಪಿಟ್‌ನಲ್ಲಿ ಇರುತ್ತಾರೆ.

ಈ ಘಟನೆಯಲ್ಲಿ ಕ್ಯಾಬಿನ್ ನಲ್ಲಿ ಇಬ್ಬರು ಪೈಲಟ್‌ಗಳು ಕ್ರೂ-ಪೊಸಿಷನಿಂಗ್‌ಗಾಗಿ ಪ್ರಯಾಣಿಸುತ್ತಿದ್ದುದು ಸಹಾಯಕವಾಗಿ ಪರಿಣಮಿಸಿದೆ. ಸಾಮಾನ್ಯವಾಗಿ ಹಾರಾಟಕ್ಕೆ ಮುನ್ನ ಎಲ್ಲ ಅಧಿಕೃತ ಪ್ರಯಾಣಿಕರು ವಿಮಾನವನ್ನು ಏರಿದ ನಂತರ ವಿಮಾನದ ಹೊರಗಿನ ಬಾಗಿಲುಗಳನ್ನು ಮುಚ್ಚಲಾಗುತ್ತದೆ. ಆ ಕ್ಷಣದಿಂದ ವಿಮಾನ ಮತ್ತೆ ನೆಲಕ್ಕಿಳಿದು ವಿಮಾನದ ಬಾಗಿಲುಗಳನ್ನು ಮತ್ತೆ ತೆರೆಯುವ ತನಕ ಕಾಕ್‌ಪಿಟ್ ಬಾಗಿಲು ಲಾಕ್ ಆಗಿರುತ್ತದೆ. ಆದರೆ ಅಧಿಕೃತ ಪ್ರವೇಶಕ್ಕೆ ಅನುಮತಿ ಇದ್ದೇ ಇರುತ್ತದೆ.

ಪೈಲಟ್‌ಗಳು ತಮ್ಮ ಎರಡೂ ಆಸನಗಳಿಂದಲೇ ಕಾಕ್ ಪಿಟ್ ಬಾಗಿಲನ್ನು ಲಾಕ್ ಮತ್ತು ಅನ್‌ಲಾಕ್ ಮಾಡಬಹುದು ಹಾಗೂ ಬಾಗಿಲಿನ ಹೊರಗಿನ ಪ್ರದೇಶದ ಉಸ್ತುವಾರಿ ನಡೆಸಬಹುದು. ಕ್ಯಾಬಿನ್ ಸಿಬ್ಬಂದಿ ಆಕ್ಸೆಸ್ ಕೀಪ್ಯಾಡ್ ಮೂಲಕ ಪ್ರವೇಶಕ್ಕಾಗಿ ವಿನಂತಿಸಬಹುದು. ಪೈಲಟ್‌ನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದರೆ, ನಿಗದಿತ ಸಮಯದ ನಂತರ ವ್ಯವಸ್ಥೆಯೇ, ಪ್ರವೇಶಕ್ಕೆ ಅನುಮತಿ ನೀಡಬಹುದು. ಪೈಲಟ್ ಸಕ್ರಿಯವಾಗಿ ಪ್ರವೇಶವನ್ನು ತಡೆಯದಿದ್ದರೆ ಮಾತ್ರ ಇದು ಸಾಧ್ಯ.

ಕಾಕ್‌ಪಿಟ್ ಗೆ ನುಗ್ಗಲು ಪ್ರಯತ್ನಿಸುವ ಪ್ರಯಾಣಿಕರನ್ನು ತಡೆಯಲು ಈ ಸುರಕ್ಷತಾ ಪದರಗಳು ಅತ್ಯಂತ ಪರಿಣಾಮಕಾರಿ. ಆದರೆ ಕಾಕ್‌ಪಿಟ್‌ನೊಳಗೆ ಈಗಾಗಲೇ ಇರುವ ಪೈಲಟ್ ವಿರುದ್ಧ ಈ ಯಾವುದೇ ಸುರಕ್ಷತಾ ಕ್ರಮಗಳು ಉಪಯೋಗಕ್ಕೆ ಬರುವುದಿಲ್ಲ.

ಒಳಗಿನ ಅಪಾಯವು ದುರುದ್ದೇಶ, ಸೈದ್ಧಾಂತಿಕ ಉದ್ದೇಶ, ಒತ್ತಡ, ಸೇಡಿನ ಮನೋಭಾವ ಅಥವಾ ಆರ್ಥಿಕ ಒತ್ತಡದಿಂದ ಉಂಟಾಗಬಹುದು. ಆದರೆ ನಿರ್ಲಕ್ಷ್ಯ, ಆತ್ಮತೃಪ್ತಿ, ದಣಿವು, ದುರ್ಬಲ ಮೇಲ್ವಿಚಾರಣೆ ಮತ್ತು ಕಾರ್ಯವಿಧಾನಗಳ ಉಲ್ಲಂಘನೆಯಿಂದಲೂ ಒಳಗಿನ ಅಪಾಯ ಜರುಗಬಹುದು.

ಕೋಡ್ 7500 ಮತ್ತು ತುರ್ತು ಭೂಸ್ಪರ್ಶ

ಟ್ರಾನ್ಸ್‌ಪಾಂಡರ್ ಸ್ಕ್ವಾಕ್ ನಾಲ್ಕು ಅಂಕಿಗಳ ಕೋಡ್ ಆಗಿದ್ದು, ವಿಮಾನವು ಅದನ್ನು ಏರ್ ಟ್ರಾಫಿಕ್ ಕಂಟ್ರೋಲ್‌ಗೆ ಕಳುಹಿಸುತ್ತದೆ. 7500 ಕೋಡ್ ಅನಧಿಕೃತ ಹಸ್ತಕ್ಷೇಪಕ್ಕಾಗಿ ಬಳಸಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಹೈಜಾಕ್ ಕೋಡ್ ಎಂದು ಕರೆಯಲಾಗುತ್ತದೆ. 7700 ಕೋಡ್ ನ್ನು ವೈದ್ಯಕೀಯ, ತಾಂತ್ರಿಕ, ಬೆಂಕಿ, ನಿಯಂತ್ರಣಕ್ಕೆ ಸಂಬಂಧಿಸಿದ ಸಮಸ್ಯೆ ಅಥವಾ ಯಾವುದೇ ಇತರ ಅಪಾಯವಾಗಿರಲಿ, ವಿಮಾನಕ್ಕೆ ತುರ್ತು ಆದ್ಯತೆ ನೀಡಲು ಬಳಸಲಾಗುತ್ತದೆ.

7500 ಕೋಡ್ ಕಳಿಸಿದ ಮಾತ್ರಕ್ಕೆ ಸಾಂಪ್ರದಾಯಿಕ ಅರ್ಥದಲ್ಲಿ ಹೈಜಾಕಿಂಗ್ ನಡೆದಿದೆ ಎಂದು ಸಾಬೀತಾಗುವುದಿಲ್ಲ. ವಿಮಾನದಲ್ಲಿ ಯಾರಾದರೂ ಕಾನೂನುಬಾಹಿರ ಹಸ್ತಕ್ಷೇಪ ನಡೆಸುತ್ತಿರಬಹುದು ಎಂಬ ಸೂಚನೆಯನ್ನೂ ಅದು ನೀಡುತ್ತದೆ. ಅಷ್ಟೇ ಅಲ್ಲದೆ, ಹೈಜಾಕ್ ಪ್ರಯತ್ನ, ಕಾಕ್‌ಪಿಟ್‌ಗೆ ಹಿಂಸಾತ್ಮಕ ಪ್ರವೇಶ, ಒತ್ತಡ ಹೇರಿಕೆ ಅಥವಾ ವಿಮಾನದ ನಿಯಂತ್ರಣಕ್ಕೆ ಅಪಾಯಕರ ಪ್ರತಿಕೂಲ ಕೃತ್ಯಗಳೂ ಇದ್ದಿರಬಹುದು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR